ನ ನಿಶ್ಚಿತಾರ್ಥಾತ್ ವಿರಮಂತಿ ಧೀರಾಃ

# ಆಯುರ್ವೇದ

ಕನ್ನಡ ಮಾಸಪತ್ರಿಕೆ, ಮೈಸೂರು.

ವಾರ್ಷಿಕ ಚಂದಾ ರೂ. ೩ ಬಿಡಿಪ್ರತಿ ಬೆಲೆ ೪ ಆಣೆ

# ಆಯುರ್ವೇದ

ಕನ್ನಡ ಮಾಸಪತ್ರಿಕೆ

ಪ್ರಕಾಶಕರು :
ಕಾ. ರಾ. ಪುರಾಣಿಕ್
ಆಯುರ್ವೇದ ಕಾರ್ಯಾಲಯ
1373 ನಾರಾಯಣಶಾಸ್ತ್ರಿ ಬೀದಿ
ಮೈಸೂರು

ಮುದ್ರಕರು :
ಪರಿಮಳ ಪ್ರೆಸ್
ಸೂರಡಿ ರಸ್ತೆ ಮೈಸೂರು

## ಸಂಪಾದಕ ಮಂಡಲಿಯವರು

## ವಿಷಯ ಸೂಚನೆ:—

—oo—

ಶ್ರೀ ಧನ್ವಂತರಯೇ ನಮಃ

# ಆಯುರ್ವೇದ

ಕನ್ನಡ ಮಾಸಪತ್ರಿಕೆ

ಆಯುಃ ಕಾಮಯಮಾನೇನ ಧರ್ಮಾರ್ಥಸುಖಸಾಧನಮ್ ।
ಆಯುರ್ವೇದೋಪದೇಶೇಷು ವಿಧೇಯಃ ಪರಮಾದರಃ ॥

ಂಪುಟ ೫]    ನಂದನ ಸಂ| ಮಾಘ February 1953    [ಸಂಚಿಕೆ ೫

## ಆಯುರ್ವೇದೀಯ ದ್ರವ್ಯವಿಜ್ಞಾನ

ಲೇಖಕರು :— ವೈದ್ಯ, **ಕೃ. ರಾ. ಕುಲಕರ್ಣಿ (ಕೊರ್ತಿ)** ಬಿಜಾಪುರ.

ಈ ವಿಷಯವಾಗಿ ತಮ್ಮ ಡಿಸೆಂಬರ ಸಂಚಿಕೆಯಲ್ಲಿ, ವೈದ್ಯ, ವ್ಹಿ, ಎಲ್. ಯಮ
ನಮರಡಿಯುವರು ಬರೆದಿದ್ದಾರಷ್ಟೆ. "ಆಯುರ್ವೇದ ದ್ರವ್ಯವಿಜ್ಞಾನಕ್ಕೂ ಮತ್ತು
ಾಶ್ಚಾತ್ಯ ದ್ರವ್ಯವಿಜ್ಞಾನಕ್ಕೂ ತುಲನೆ ಮಾಡಿ ನಮ್ಮ ಆಯುರ್ವೇದ ದ್ರವ್ಯಗುಣವು
ಾಶ್ಚಾತ್ಯ ದ್ರದ್ಯಗುಣಕ್ಕಿಂತಲೂ ತಿಲಮಾತ್ರವೂ ಕಡಿಮೆ ಇಲ್ಲದೇ ಚಿಕಿತ್ಸೆಯಲ್ಲಿ
ದಕ್ಕೂ ಮುಂದುವರೆದಿತ್ತೆಂಬುದನ್ನು ವೈದ್ಯಸಮೂಹಕ್ಕೆ ಮನವರಿಕೆ ಮಾಡಿ
ೊಡಲು ಪ್ರಯತ್ನಿಸಿದ್ದೇನೆ" ಎಂದು ಹೇಳಿ ಲೇಖವನ್ನು ಪ್ರಾರಂಭಿಸಿದ್ದೇನೋ
ಜ. ಆದರೆ ಮುಂದೆ ವಿವರಿಸಿದ್ದೆಲ್ಲ ತದ್ವಿಪರೀತವಾಗಿದೆ. ಆಯುರ್ವೇದ ದ್ರವ್ಯ
ುಣಕ್ಕಿಂತಲೂ ಪಾಶ್ಚಾತ್ಯ ದ್ರವ್ಯಗುಣದ ಮೇಲ್ಮೆಯನ್ನೇ "ವೈದ್ಯಸಮೂಹಕ್ಕೆ"
ುನವರಿಕೆಯಾಗುವಂತೆ ಬರೆದಿದ್ದಾರೆ. ಅವರ ಭಾಷೆಯಲ್ಲಿಯೇ ಹೇಳುವುದಾದರೆ
ಸೃಷ್ಟಿಯಲ್ಲಿ ಸತತವಾಗಿ ಉತ್ಕ್ರಾಂತಿಯು ನಡೆದಿರುವ ಮೂಲಕ ಸ್ಥೂಲದ್ರವ್ಯ
ುತ್ತು ಜೀವಿಗಳ ಘಟಕ ಮತ್ತು ರಚನೆಗಳಲ್ಲಿ ಬದಲಾವಣೆಯಾಗುತ್ತ ನಡೆದಿರು
ುದು. ಆದುದರಿಂದ ಅವರ ಶಾಸ್ತ್ರದಲ್ಲಿ ಸತತವಾದ ಬದಲಾವಣೆಯ ಸ್ವರೂಪ
ಂಡುಬರುವುದು." ಅಂದರೆ ನಮ್ಮ ಶಾಸ್ತ್ರವು ಸ್ಥಗಿತವಾಗಿದ್ದು, ಅವರ ಶಾಸ್ತ್ರವು
ಪ್ರಗತಿಪರವಾಗಿದೆಯೆಂದಂತಾಯ್ತು. ಮುಂದುವರೆದು, ದ್ರವ್ಯವು ಆಯುರ್ವೇದಿಯೇ

ಇರಲಿ, ಎಲ್ಲೋಪಥಿಯದೇ ಇರಲಿ ಹೆಸರು ಮಾತ್ರ ಭಿನ್ನ ದ್ರವ್ಯ ಒಂದೇ. ಯಾಕೆಂದರೆ "A thing is a thing by what-ever name it is called" ಆದಕಾರಣ ಪಾಶ್ಚಾತ್ಯ........ದ್ರವ್ಯಗಳನ್ನು ಉಪಯೋಗಿಸಲು ಆತಂಕವಿಲ್ಲೆಂದು........ ನಿಶ್ಚಯದಿಂದ ಹೇಳಬಲ್ಲೆ" ಎಂದು ಸಾರಿದ್ದಾರೆ.

ಇಲ್ಲಿ ಒಂದು ಹಾಸ್ಯಪ್ರಸಂಗವು ನೆನಪಿಗೆ ಬರುತ್ತದೆ. ನ್ಯಾಯಾಲಯದಲ್ಲಿ ಒಂದು ವ್ಯಾಜ್ಯವು ನಡೆದಿತ್ತು. ವಕೀಲರು—ಪಾಪ! ಅವರದು ಸ್ವಲ್ಪ ಮರೆವಿನ ಸ್ವಭಾವ—ಒಳ್ಳೇ ಜೋರಾಗಿ ವಾದಿಸಿದರು. ನ್ಯಾಯಾಧೀಶರು ಅವರಿಗೆ ರಾಯರೇ ತಾವು ಯಾರ ಪರವಾಗಿ ವಾದಿಸಿದ್ದು ಅಂತ ಕೇಳಿದರು. ಆಗಲೇ ಆ ವಕೀಲರಿಗೆ ತಾವು ವಾದಿಸಿದ್ದು, ತಮ್ಮ ವಿರುದ್ಧ ಪಕ್ಷದವರ ಪರವಾಗಿಯೆಂದು ತಿಳಿದದ್ದು. ಹಾಗಾಗಿದೆ ಈ ಲೇಖನದಲ್ಲಿಯೂ ಕೂಡ.

ಆಯುರ್ವೇದದ ಮೂಲ ಸಿದ್ಧಾಂತಗಳೇ ಬೇರೆ, ಪಾಶ್ಚಾತ್ಯ ವೈದ್ಯಕದ ಮೂಲಸಿದ್ಧಾಂತಗಳೇ ಬೇರೆ. ನಮ್ಮ ದೃಷ್ಟಿಕೋನವೇ ಬೇರೆ, ಅವರ ದೃಷ್ಟಿಕೋನವೇ ಬೇರೆ. ನಾವು ಯಾವುದೇ ದ್ರವ್ಯದ ಗುಣಧರ್ಮಗಳನ್ನು ಹೇಳುವುದಾದರೆ, ಅದು ವಾತಾದಿ ಯಾವ ದೋಷಗಳ ಮೇಲೆ ಕಾರ್ಯ ಮಾಡುತ್ತದೆ, ಅದರ ರಸವೀರ್ಯ, ವಿಪಾಕಗಳೇನು ಎಂದು ಮುಂತಾಗಿ ವಿಚಾರಿಸುತ್ತೇವೆ. ಅವರು ಯಾವ ರೋಗಾಣುಗಳನ್ನು ನಾಶಮಾಡುತ್ತದೆ, ಯಾವ ಅವಯವದ ಮೇಲೆ ಅದರ ಕಾರ್ಯವಿದೆ ಎಂದು ಮುಂತಾಗಿ ನೋಡುವರು. ಯದ್ಯಪಿ ದ್ರವ್ಯ ಒಂದೇ ಆಗಿದ್ದರೂ, ಅದನ್ನು ಸಿದ್ಧಗೊಳಿಸುವ ಕ್ರಮಗಳೂ ಬೇರೆಬೇರೆಯವೆ. ಉದಾಹರಣಾರ್ಥವಾಗಿ ವತ್ಸನಾಭಿಯನ್ನು ತೆಗೆದುಕೊಳ್ಳೋಣ. ಎರಡೂ ಶಾಸ್ತ್ರಗಳಲ್ಲಿ ಇದರ ಉಪಯೋಗ ಹೇಳಿದೆ. ಶ್ರೀ ಯಮುಕನಮರಡಿಯವರನ್ನುವಂತೆ, "Aconite is aconite, by whatever name it is called" ಇದು ಸತ್ಯವಿದ್ದರೂ ಪಾಶ್ಚಾತ್ಯಪದ್ಧತಿಯಿಂದ ತಯಾರಿಸಿದ ಅದರ ಕಲ್ಪಗಳು ಹೃದಯಾವಸಾದಕಗಳಾಗಿವೆ. ಆದರೆ ಆಯುರ್ವೇದಪದ್ಧತಿಯಿಂದ ತಯಾರಿಸಿದ ಅದರ ಕಲ್ಪಗಳು ಹೃದ್ಯ ಮತ್ತು ಜ್ವರನಾಶಕವಾಗಿವೆ. ಇದನ್ನು ಡಾ|| ಕೆ. ಸಿ. ಬೋಸ ಎಂಬುವರು ಸಪ್ರಯೋಗವಾಗಿ ಕಂಡುಕೊಂಡು ತಮ್ಮ Pharmacopoeia Indica ಎಂಬ ಗ್ರಂಥದಲ್ಲಿ ಹೇಳಿದ್ದಾರೆ. "With the above experimental data, it is advisable to use the preparation made from the mitigated Aconite, as it is a cardiae tonic as well as antipyretic"

ಪಾಶ್ಚಾತ್ಯವೈದ್ಯಕದಲ್ಲಿ ನಿಷ್ಣಾತರಾದವರೇ ಹೀಗೆ ಹೇಳುತ್ತಿದ್ದಾಗ್ಯೂ—ಶ್ರೀ ಯಮುಕನಮರಡಿಯವರಂಥ ಸನ್ಮಾನ್ಯವೈದ್ಯರು, ಮೇಲಿನಂತೆ ಸಾರುವುದು ನಿಜವಾಗಿಯೂ ವಿಷಾದಕರವಲ್ಲವೆ?

# ಮಹಾಮಾರಿ— Plague

ಲೇಖಕರು:—"ಕಿರಣ್" ಬೆಂಗಳೂರು.

——oo——

**ಆಯುರ್ವೇದರೀತ್ಯಾ ಚಿಕಿತ್ಸೆ:—**

ರೋಗಿಗೆ 'ಚಂಡೇಶ್ವರ ರಸ' ಜೇನಿನೊಡನೆ ಹೊಟ್ಟೆಗೆ ಕೊಡಬೇಕು. ಗೆಡ್ಡೆಗೆ ಮಲ್ಲಾದಿಲೇಪ, ಪ್ರತಿಸಾರಸೀಯುಕ್ಷಾರ, ಗ್ರಂಥಿಭೇದನಲೇಪ, ಮೊದಲಾದವುಗಳನ್ನು ರೋಗಕ್ಕನುಗುಣವಾಗಿ ಲೇಪಿಸಬಹುದು.

ಪ್ರಾರಂಭ ಅವಸ್ಥೆಯಲ್ಲಿ ಅಫೀಮನ್ನು ಬ್ರಾಂದಿಯಲ್ಲಿ ಬೆರಸಿ ಮೂರು ಗಂಟೆಗೊಮ್ಮೆ ಲೇಪಹಾಕತಕ್ಕದ್ದು. ಐದು ಮಿನಿಟಿನ ನಂತರ ಒಂದು ಗಂಟೆವರೆಗೆ ಸೇಕ ಕೊಡಬೇಕು. ಹೀಗೆ ಮಾಡುವುದರಿಂದ ಗೆಡ್ಡೆ ಒಡೆಯುವುದು. ಅಥವಾ ರಕ್ತಶೋಧನೆಯಾಗಿ ರಕ್ತ ಹರಡುವುದು. ಐಸ್ ಚೀಲದಲ್ಲಿ ಹಾಕಿ ಗೆಡ್ಡೆಯಮೇಲೆ ಇಡುತ್ತಾ ಇದ್ದರೆ ಗೆಡ್ಡೆ ಅಲ್ಲಿಯೇ ಕರಗಿಹೋಗುವುದೂ ಉಂಟು. ಮಹಾಮೃತ್ಯುಂಜಯರಸ, ಸಂಜೀವಿನಿವಟಿ, ಸುದರ್ಶನಚೂರ್ಣ, ಕ್ವಾಥ, ಮೊದಲಾದುವನ್ನು, ಕೊಡಬಹುದು. ಮೂರ್ಛೆ ಬಂದರೆ ಹೇಮಗರ್ಭ ಪೋಟಲೀರಸ, ಸಚೇತನಗುಟಿಕಾ ಮೊದಲಾದವುಗಳ ಪ್ರಯೋಗ ಹಿತಕರವಾಗಿದೆ.

ರೋಗಿಯನ್ನು ಎಬ್ಬಿಸಬಾರದು. ಮಲಗಿದಲ್ಲಿಯೇ ಎಲ್ಲಾ ಉಪಚಾರಗಳನ್ನೂ ಮಾಡತಕ್ಕದ್ದು. ಮೇಲಿಂದಮೇಲೆ ಎದ್ದರೆ ಹೃದಯಕ್ರಿಯೆ ನಿಂತು ಸಾಯುವ ಸಂಭವವಿರುತ್ತದೆ. ರೋಗಿ ತಂಪಾಗಿರುವ ಕೋಣೆಯಲ್ಲಿ ಮಲಗಿರಬೇಕು. ಆಹಾರ ಪಾನಗಳಿಗೆ ಬಿಸಿಮಾಡಿ ತಣಿಸಿದ ನೀರು, ಗಂಜಿ, ಹಾಲು ಮಾತ್ರ ಕೊಡಬೇಕು. ಗುಣವಾಗುತ್ತಾ ಬರುವಾಗ ಅನ್ನದ ಗಂಜಿ, ಹಿಟ್ಟಿನ ಗಂಜಿ ಕೊಡಬಹುದು.

**ಈ ರೋಗ ಪ್ರತಿಬಂಧಕ ಉಪಾಯ :—**

ಶರೀರವನ್ನು ಸ್ವಚ್ಛವಾಗಿರಿಸತಕ್ಕದ್ದು. ರೋಗಿಗಳ ಹತ್ತಿರ ಹೋಗದಿರುವುದು. ಸದಾಚಾರಿಗಳಾಗಿರುವುದು. ರೋಗಿಗಳ ಹತ್ತಿರ ಹೋದರೂ ಬಟ್ಟೆ ವಗೈರೆ ಬದಲಾಯಿಸುವುದು. ಮನೆಯ ಮೇಲುಗಡೆ ಸೂರ್ಯರಶ್ಮಿ ಚೆನ್ನಾಗಿ ಬೀಳುವಲ್ಲಿ ಮಂಚದಮೇಲೆ ಮಲಗುವುದು. ನಡೆಯುವಾಗ ಮೆಟ್ಟು ವಗೈರೆ ಉಪಯೋಗಿಸುವುದು. ರೋಗಿ ಸತ್ತರೆ ಗಾಭರಿ ಪಡದಿರುವದು ಮಾಂಸಾಹಾರವನ್ನು ಬಿಡುವುದು. ತುಲಸಿ ಕಷಾಯ ಕುಡಿಯುತ್ತಾ ಇರುವುದು. ನೀರನ್ನು ಚೆನ್ನಾಗಿ ಬಿಸಿಮಾಡಿ ತಣಿಸಿ ಉಪಯೋಗಿಸುವುದು. ಮುಖ್ಯವಾಗಿ ಸ್ವಚ್ಛತೆಯ ಕಡೆಗೆ ಹೆಚ್ಚು ಗಮನ ಕೊಡತಕ್ಕದ್ದು. ಈ ರೋಗವು ಕಂಡುಬಂದರೆ ಅಥವಾ

ಅಕ್ಕಪಕ್ಕದಲ್ಲಿದ್ದರೆ ಕೂಡಲೇ ಈ ಯೋಗ್ಯ ಕಾರ್ಯಕ್ರಮಗಳನ್ನು ಕೈಕೊಳ್ಳಲು ಯಾವಾಗಲೂ ಆಲಸ್ಯಮಾಡಬಾರದು

[ಪ್ಲೇಗಿನ ಗೆಡ್ಡೆಗೆ ಸೀರಕೊಡುವ ವಿಚಾರದಲ್ಲೂ, ತುಲಸೀಕಷಾಯ ಸೇವನೆಯ ವಿಚಾರದಲ್ಲೂ ಅಭಿಪ್ರಾಯ ಭೇದಗಳಿವೆ. ಇದಕ್ಕೆ ಲೇಖಕರು ಶಾಸ್ತ್ರೀಯ ಸಮರ್ಥನೆ ಕೊಡುವುದು ಯುಕ್ತವು. ಸಂ||]

• • • •

# ಆಯುರ್ವೇದವೂ ಪಾಶ್ಚಾತ್ಯ ವಿಜ್ಞಾನಶಾಸ್ತ್ರವೂ

ಆಯುರ್ವೇದ ವಿದ್ವಾನ್ ಡಾ|| ಅಗರಂ ವೆಂಕಟರಾಮ ಪಂಡಿತರು

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

basis in the universe—The Absolute—to be worshipped as a Supreme Being or reduced by science to a single physical force like that which binds the atoms of all substances together."

ಮೊದಲನೆಯ ಪ್ರವಾಹದ ಜ್ಞಾನಿಗಳ **ಭೌತಿಕವಾದದ ಯುಗದಲ್ಲಿ** ಯಾವ ರೀತಿಯಲ್ಲೇ ಎಲ್ಲಾ ಪ್ರಪಂಚವೂ ಸ್ಥೂಲಭೂತವಸ್ತುಗಳ ಸ್ವರೂಪವೇ ಎಂದು ಸಾರಿದ್ದವೋ ಎರಡನೆಯ ಪ್ರವಾಹದ ವಿಜ್ಞಾನಿಗಳ **ಯುಗದಲ್ಲಿ ಶಕ್ತಿವಾದದ** ಆಗಿನ ಕಾಲದ ವಿಜ್ಞಾನಿಗಳು ಅನೇಕಾನೇಕ ಸಂಶೋಧನೆಗಳಿಂದ ಈ ಜಗತ್ತು ಒಂದೇ ಒಂದು ಶಕ್ತಿಯ ರೂಪಾಂತರವೆಂದು ಜಗತ್ತಿಗೆ ಸಾರಿ, ಸಾಮಾನ್ಯ ಜನರ ಹಿಂದಿನ ಅಭಿಪ್ರಾಯಗಳನ್ನು (ಭೌತಿಕವಾದಿಗಳ ಮನಸ್ಸನ್ನು) ಬದಲಾವಣೆ ಮಾಡಿದರು.

ಈ ವಿಷಯವು ಈ ಲೇಖನದಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ. ಇತ್ತೀಚೆಗೆ ನಮ್ಮಗಳ ಕಾಲದಲ್ಲಿ ಈ ಅಭಿಪ್ರಾಯವೂ ಸರಿಯಾದುದಲ್ಲವೆಂದೂ ಜಗತ್ತೆಲ್ಲವೂ ಮನಸ್ಸಿನ ಸಂಕಲ್ಪದ (Thought) ಪರಿಣಾಮವಲ್ಲದೆ ಮತ್ತೇನೂ ಅಲ್ಲವೆಂಬುದನ್ನು "Fourth Dimension" ಮುಂತಾದ ಅನೇಕ ಭಾಷೆಗಳಿಂದ ಅರ್ಥವಾಗದ ರೀತಿಯಲ್ಲಿ ವರ್ಣಿಸುತ್ತಲಿದ್ದಾರೆಂಬುದು ಈ ಕೆಳಗೆ ಕೊಟ್ಟಿರುವ ವಿಷಯಗಳನ್ನು ಓದುವುದರಿಂದ ಬಹಳ ಮಟ್ಟಿಗೆ ಸ್ಪಷ್ಟಪಡುವುದು.

" Sir James Jeanes in "Mysterious Universe"

"Berkeley summed up his philosophy in the words.

"All the choir of heaven and furniture of earth, in a word all those bodies which compose the mighty frame of the world have not any substance without the mind.................. So long as they are not actually perceived by me, or do not exist in my mind or that of any other created spirit, they must either have no existence at all, or else subsist in the mind of some Eternal Spirit"

Modern science seems to lead, by a very different road, to a not altogether dissimilar conclusion. Biology, studying the connection between the earlier links of the chain, A,B,C,D, seems to be moving towards the conlusion that these are all of the same general nature. This is occasionally stated in the specific form that, as biologists believe C. D to be mathamatical and material, A. B. must also be mechanical and material, but apparently there would be at least equal warrant for stating it in the form that since A, B. are mental, C. D. must also be mental. Physical science, troubling little about C. D. proceeds directly to the far end of the chain. Its business is to study the workings of X, Y, Z and as it seems to me, its conclusions suggest that the endlinks of the chain, whether we go to the cosmas as the whole or to the inner-most, structure of the atom, are of the same nature as A. B —of the nature of pure thought ; we are led to the conclusion of Berkeley, but we reach them from the other end. Becaus of this, we come upon the last of Berkeley's three alternatives first and the others appear unimportant by comparison It does not matter whether objects "Exist in my mind

or that of any other created spirit" or not; their objectivity arises "In the mind of some Eternal Spirit"

This may suggest that we are proposing to disregard realism, and enthrone a thorough-going idealism in its peace. Yet this, I think, would be too crude a statement of the situation. If it is true that the "real essence of substances" is beyond our knowledge then the line of demarcation beetween realism and idealism becomes very blurred indeed; it becomes little more than a relic of a past age in which reality was believed to be identical with mechanism Objective realities—exist, because certain things affect your consciousness and mine in the same way, but we are assuming something we have no right to assume if we label them as either "real." or "ideal." The true label is I think "mathematical" if we can agree that this is to connote the whole of pure thought and not merely the studies of the proffessional mathematician.

* * * *

*Proffessor Eddington says in—"The Nature of the Physical World"*—pp 267—68.

"To put the conclusion crudely, the stuff of the world is the mind stuff. All knowledge of our environment enters in the form of messages transmitted along the nerves to the seat of consciousness. It is only our end fibres that we actually know."

* * * *

*Frances Mason in "The great Design" writes :—*

"We are led from our own mind back.........

"All phenomena are under the manifestation of life

The operation and play of the life which is the universe"

* * * *

Lawson in *Science and reality* page 63 says—

"Cosmic mind and cosmic energy constitute a unity in whole Cosmic mind is the initiating impelling and directing activity.

* * * *

"Uutil recently it was supposed that matter could exist only in three states—solid, liquid, and gaseous ..................But our exploration of the sun's interior has shown that there is a fourth state in which the atoms are broken up into their constituent particles; we many describe it as a state of "Powdered atom"

(Articleon "Cosmic physics" by Sir James Jeans in the composite volume *the march of science* 1931—35

* * * *

Sir James Jeans in "The mysterious universe :—

"If the universe is a universe of thought, then its Creation must have been an act of thought. Indeed the finiteness of time and space almost compel us, of themselves, to picture the creation as an act of thought; the determination of the constants such as the radius of the universe and the number of electrons it contained imply thougt, whose richness is measured by the immensity of these qualities, Time and spaee. which are the setting for the thought must have come into being as part of this act. Primitive cosmologies pictured a creator working in space and time, forging sun, moon and stars out of already existant raw material.

ಚಂದ್ರಮಾಮನಸೋಜಾತಃ— ಚಕ್ಷೋಃಸೂರ್ಯೋ ಅಜಾಯತ' ಧಾತಾ ಯಥಾಪೂರ್ವಂ ಅಕಲ್ಪಯತ್" ಎಂಬ ವೇದವಾಕ್ಯವನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು.

Modern scientific theory compels us to think of the creator as working outside time and space which are part of his creation, just as the artist is outside his creation.

"ದಿಕ್ಕಾಲಾದ್ಯನವಚ್ಛಿನ್ನಾನಂತಚಿನ್ಮಾತ್ರಮೂರ್ತಯೇ" ಎಂಬುದನ್ನೂ, ಪುರುಷಸೂಕ್ತದಲ್ಲಿ— ದಿಶಃ ಶ್ರೋತ್ರಾತ್ ವಸಂತೋಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಶ್ಶರತ್ ಎಂಬುದನ್ನೂ ಜ್ಞಾಪಿಸಿಕೊಳ್ಳಬೇಕು.

Itaccords with the conjucture of Agustine. "Non in tempore, and come tempore. finxit Deus mundum" Indeed, the doctrine dates back as far as Plato :—

(ಮುಂದುವರಿಯುವುದು)

---

# ಆಯುರ್ವೇದದಲ್ಲಿ ಸಾಂಕ್ರಾಮಿಕ ರೋಗಗಳು

ಬರೆದವರು : ವೈದ್ಯ ವಿನಾಯಕರಾವ್ ಜಾಕಟ್‌ರವರು.

[ಇದರ ಪೀಠಿಕಾ ಪ್ರಕರಣವು ಸಾಂಕ್ರಾಮಿಕ ವಿಶೇಷಾಂಕದಲ್ಲಿ ಪ್ರಕಟವಾಗಿದೆ.]

"ಸಾಂಕ್ರಾಮಿಕ ರೋಗ" ಎಂಬ ಶಬ್ದವು ಆಯುರ್ವೇದಕ್ಕೆ ಹೊಸದೇನೂ ಅಲ್ಲ. ಈ ರೋಗಗಳು ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದರಿಂದಲೂ ಒಟ್ಟೊಟ್ಟಾಗಿ ಒಂದೇಸಾರಿ ಅನೇಕ ಜನರಲ್ಲಿ ಸಮಾನರೀತಿಯಲ್ಲಿ ರೋಗೋತ್ಪತ್ತಿ ಮಾಡುವುದರಿಂದಲೂ ಇದಕ್ಕೆ ಸಂಕ್ರಾಮಿಕ ( ಸಮ್-ಕ್ರಾಮತಿ ) ಎಂಬ ಹೆಸರು ಬಂದಿದೆ. ಚರಕಸುಶ್ರುತಾದಿಗಳು ಈ ಗುಂಪಿನ ರೋಗಗಳನ್ನು ಔಪಸರ್ಗಿಕ ರೋಗಗಳು, ಜನಪದೋಧ್ವಂಸರೋಗಗಳು ಎಂಬ ಹೆಸರಿನಿಂದ ಕರೆದಿದ್ದಾರೆ. ಒಂದೇ ಸಾರಿ ಇಡೀ ದೇಶದಲ್ಲೆಲ್ಲಾ ಮಹಾಮಾರಿಯ ರೂಪದಲ್ಲಿ ಹರಡುವ ರೋಗಗಳಿಗೆ ಜನ

ಪದೋಧ್ವಂಸರೋಗಗಳೆಂದು ಹೆಸರು. ಇಷ್ಟೇ ಅಲ್ಲದೆ ಈ ರೋಗಗಳು ಉತ್ಪನ್ನವಾಗುವರೀತಿ, ಹರಡುವ ವಿಧಾನ, ವಿವಿಧ ರೂಪಗಳು, ಚಿಕಿತ್ಸೆ ಹಾಗೂ ಪ್ರತಿಬಂಧಕ ಉಪಾಯಗಳನ್ನು ಸಹ ನಮ್ಮ ಪೂರ್ವಜನರು ತಿಳಿದುಕೊಂಡಿದ್ದರಿಂದಲೇ ಇವುಗಳ ವರ್ಣನೆಯು ಈಗಲೂ ದೊರೆಯುತ್ತಿವೆ.

**ಸಾಂಕ್ರಾಮಿಕ ರೋಗಗಳಾವುವು ?**

೧. ಕುಷ್ಠಂಜ್ವರಶ್ಚ ಶೋಷಶ್ಚ ನೇತ್ರಾಭಿಷ್ಯಂದ ಏವಚ |
ಔಪಸರ್ಗಿಕ ರೋಗಾಶ್ಚ ಸಂಕ್ರಾಮಂತಿನರಾನ್ನರಮ್ || ಮಾ. ನಿ.

೨. ಕಂಡೂ ಕುಷ್ಠೋಪದದಂಶಶ್ಚ ಭೂತೋನ್ಮಾದ ವ್ರಣಜ್ವರಾಃ |
ಔಪಸರ್ಗಿಕ ರೋಗಾಶ್ಚ ಸಂಕ್ರಾಮಂತಿನರಾನ್ನರಮ್ || ಭಾ. ಪ್ರ.

೩ ತ್ವಗಕ್ಷಿ ರೋಗ ಪಸ್ಮಾರ ರಾಜಯಕ್ಷ್ಮ ಮಸೂರಿಕಾ |
ದರ್ಶನಾತ್ ಸ್ಪರ್ಶನಾದ್ವಾನಾತ್ ಸಂಕ್ರಾಮಂತಿನರಾನ್ನರಮ್ ||
ಉರಭ

೪. ಮಸೂರಿಕಾಶ್ಚರೋಮಾಂತ್ಯೋ ಗ್ರಂಥಿವೀಸರ್ಪ ಏವಚ |
ಉಪದಂಶಃ ಕಂಠಬಾಧಾ ಔಪಸರ್ಗಿಕ ಸಂಜ್ಞಕಾಃ || ಅ. ಹೃ.

ಹೀಗೆ ವಿವಿಧ ಸಾಂಕ್ರಾಮಿಕ ರೋಗಗಳ ಉಲ್ಲೇಖ ಹಾಗೂ ವರ್ಣನೆಗಳು ದೊರೆಯುತ್ತವೆ.

**ರೋಗ ಸಂಕ್ರಮಣದಲ್ಲಿ ಕ್ರಿಮಿಗಳ ಪ್ರಾಧಾನ್ಯತೆ**

ಆಧುನಿಕ ವಿಜ್ಞಾನವು ಬೇರೆಬೇರೆ ಜಾತಿಯ ಸೂಕ್ಷ್ಮವಾದ ರೋಗಕಾರಕ ಕ್ರಿಮಿಗಳನ್ನು ಕಂಡುಹಿಡಿದಿದೆ. ಆದರೆ ಆಯುರ್ವೇದ ಗ್ರಂಥಗಳಲ್ಲಿ ಮಾತ್ರ ಈ ಕ್ರಿಮಿಗಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಲಿಲ್ಲ ಆದಾಗ್ಯೂ ಅವರಿಗೆ ಕ್ರಿಮಿಗಳ ಜ್ಞಾನವಿರಲಿಲ್ಲವೆಂದು ಹೇಳಲಾಗುವುದಿಲ್ಲ.

**ಜೀವಾಣುಜ್ಞಾನವು ಪಾಶ್ಚಾತ್ಯವಿಜ್ಞಾನದ ಕೊಡುಗೆಯಲ್ಲ.**

ಜೀವಾಣುಜ್ಞಾನವು ಪಾಶ್ಚಾತ್ಯವಿಜ್ಞಾನದ ಒಂದು ಮಹತ್ತರವಾದ ಕೊಡುಗೆ ಎಂದು ಅನೇಕರು ತಿಳಿದಿದ್ದಾರೆ ಈ ಜೀವಾಣು ವಿಜ್ಞಾನವಾದರೋ ಕೇವಲ ಒಂದು ನೂರುವರ್ಷಗಳ ಈಚಿನದು. ಡಾ|| ಹಾಲ್ಡರ್ ಎಂಬುವರು 1849 ರಲ್ಲಿಯೂ, ಡಾ|| ಡ್ಯಾನ್ ಎಂಬುವರು 1850 ರಲ್ಲೂ, ಡಾ|| ಕಾಖ ಎಂಬುವರು 1879 ರಲ್ಲೂ ಜೀವಾಣುವಿಜ್ಞಾನದ ಬೆಳವಣಿಗೆಗೆ ಮೂಲಕಾರಣರಾದರು. ಲೂಯಿ ಪಾಶ್ಚರ್ ಎಂಬುವನು, ಅಲ್ಲಿಯವರೆಗಿನ ತಿಳಿವಳಿಕೆಯ ಮೇಲೆ ಹೆಚ್ಚು ವೈಜ್ಞಾನಿಕವೂ, ವಿವರವೂ ಆದ ಬೆಳಕನ್ನು ಬೀರಿದನು. ಅಲ್ಲಿಂದೀಚೆಗೆ ನಾನಾಜಾತಿಯ ಹೊಸಹೊಸ ಕ್ರಿಮಿಗಳ ಶೋಧವಾಗಿದೆ ಮತ್ತು ಆಗುತ್ತಲೂ ಇದೆ. ಅನೇಕ ರೋಗಗಳಿಗೆ

ಒಂದಲ್ಲ ಒಂದು ಜಾತಿಯ ಕ್ರಿಮಿಯೇ ಕಾರಣವೆಂದೂ, ಈಗ ನಿತ್ಯವೂ ಹೊಸ ದಿನ ಹೋದಂತೆ ಹೊಸಹೊಸ ರೋಗಕಾರಕವಾದ ಕ್ರಿಮಿಗಳ ಶೋಧನೆಯಾಗುತ್ತಿದೆ. ಇದೇ

ಆಯುರ್ವೇದದ ಆಧಾರಗ್ರಂಥಗಳಾದ ಚರಕ ಸುಶ್ರುತಾದಿಗಳಲ್ಲಿ ಈ ಬಗೆಯ ಸೂಕ್ಷ್ಮಾತಿಸೂಕ್ಷ್ಮ ಕ್ರಿಮಿಗಳ ಉಲ್ಲೇಖವಿದೆ. "ಸೂಕ್ಷ್ಮತ್ವಾಚ್ಚೈಕೇ ಅದೃಶ್ಯಾಃ" ಎಂಬ ಚರಕವಾಕ್ಯದಿಂದಲೂ, "ಕೇಚಿತ್ ಸೂಕ್ಷ್ಮಾ ಅದೃಶ್ಯಾಃ" ಎಂಬ ಹಾರೀತವಾಕ್ಯದಿಂದಲೂ ಇದು ಸಿದ್ಧವಾಗುತ್ತದೆ. ಈ ರೋಗಕಾರಕ ಕ್ರಿಮಿಗಳಿಗೆ ಅವರು ರಾಕ್ಷಸಾದಿ ಹೆಸರುಗಳನ್ನಿಟ್ಟರು. ಅದು ಏಕೆ ಎಂದು ತಿಳಿಯದೆ, ಇದರ ಅಂತ ರಾರ್ಥವನ್ನು ತಿಳಿದುಕೊಳ್ಳಲಾರದೆ, ದೆವ್ವ, ಭೂತಗಳೆಂದು ಅರ್ಥಮಾಡಿಕೊಂಡು ದಾರಿ ತಪ್ಪುತ್ತಿದ್ದಾರೆ.

ಹಿಂಸಾವಿಹಾರಾಣಿ ಮಹಾಪ್ರಮಾಣಿ [illegible] ರಾಣ್ಯಸುಜರಾಣಿ ಮಾಂಸಶೋಣಿತ ಪ್ರಿಯಾಣ್ಯ [illegible] ಸರ್ಪಂತಿ | ಸತ್ಕಾರಾರ್ಥಂ [illegible] ॥ ಸು. [illegible]

ಇಷ್ಟೇ ಅಲ್ಲದೆ ನಮ್ಮ ಆಚಾರ್ಯರು ಕ್ರಿಮಿಗಳಲ್ಲಿ [illegible] ಅವುಗಳನ್ನು ಬೇರೆಬೇರೆ ರೀತಿಯಲ್ಲಿ ವಿಂಗಡಿಸುವುದನ್ನು [illegible]

"ಕ್ರಿಮಯಸ್ತು ದ್ವಿಧಾ ಪ್ರೋಕ್ತಾ ಬಾಹ್ಯಾಭ್ಯಂತರಭೇದತಃ" [illegible] ಬಾಹ್ಯಕ್ರಿಮಿಗಳಲ್ಲಿ ಇಪ್ಪತ್ತು ವಿಧದ ಕ್ರಿಮಿಗಳು [illegible] ಯಥಾ:—

"ಇಹ ಖಲ್ವಗ್ನಿವೇಶ ವಿಂಶತಿವಿಧಾಃ ಕ್ರಿಮಯಃ ಪೂರ್ವಮುದ್ದಿಷ್ಟಾ ನಾನಾ ವಿಧೇನ ಪ್ರವಿಭಾಗೇನಾನ್ಯತ್ರ, ಸಹಜೇಭ್ಯಃ | ತೇ ಪುನಃ ಪ್ರಕೃತಿಭಿರ್ವಿಭಜ್ಯಮಾನಾಃ ಚತುರ್ವಿಧಾ ಭವಂತಿ. ತದ್ಯಥಾ:— ಪುರೀಷಜಾಃ ಶ್ಲೇಷ್ಮಜಾಃ ಶೋಣಿತಜಾಃ ಮಲಜಾಶ್ಚೇತಿ ||

ಚ ವಿ ಅ. 2

ಇದನ್ನೇ ಸಹಜಕ್ರಿಮಿ ಮತ್ತು ರೋಗಕಾರಕಕ್ರಿಮಿ ಎಂದು ಎರಡು ಬಗೆಯಾಗಿ ವಿಂಗಡಿಸಬಹುದು.

**ಸಹಜಕ್ರಿಮಿ.**

ಯೋಗೇಂದ್ರನಾಥಸೇನರು ಚರಕೋಪಸ್ಕಾರಾಖ್ಯ ಟೀಕೆಯಲ್ಲಿ ಹೇಳಿರುವಂತೆ, "ಸಹಜತಯಾ ಅವೈಕಾರಿಕಾಸ್ತೇ ಇಹ ನೋಚ್ಯಂತೇ" ಸಹಜಕ್ರಿಮಿಗಳು ರೋಗಕಾರಕ ವಲ್ಲದುದರಿಂದ ಅವುಗಳ ವರ್ಣನೆಯನ್ನು ಮಾಡಲಿಲ್ಲ.

ಆಧುನಿಕ ವಿಜ್ಞಾನಿಗಳು ಸಹ ಇದೇ ತರಹದ ವಿಭಾಗವನ್ನು ಮಾಡಿದ್ದಾರೆ. ಸಹಜಕ್ರಿಮಿಗಳಿಗೆ Microbes ಎಂದೂ, ರೋಗಕಾರಕಕ್ರಿಮಿಗಳಿಗೆ Bacteria ಎಂದೂ ಹೆಸರು. Microbes ಎಂಬ ಕ್ರಿಮಿಗಳು ಪ್ರಪಂಚದ ಎಲ್ಲೆಲ್ಲೂ ಹರಡಿ ಕೊಂಡಿವೆ. ಎಲ್ಲಾ ಜೀವಿಗಳ ಜೀವನಕ್ಕೂ, ಸಸ್ಯದ ಬೆಳವಣಿಗೆ ಇತ್ಯಾದಿ ಪ್ರಪಂಚದ

ಇರುವಿಕೆಗೂ ಈ ಜಾತಿಯ ಕ್ರಿಮಿಗಳು ಸಹಾಯಕವಾಗಿವೆ ಎಂಬುದನ್ನು ಆಧುನಿಕ ಹಾಗೂ ಆರ್ಷೇಯ ವಿಜ್ಞಾನಿಗಳು ಒಪ್ಪುತ್ತಾರೆ.

ರೋಗಕಾರಕ ಕ್ರಿಮಿಗಳನ್ನು ಪುರೀಷಜ, ಶ್ಲೇಷ್ಮಜ, ಶೋಣಿತಜ ಮತ್ತು ಮಲಜ ಎಂದು ನಾಲ್ಕುವಿಧವಾಗಿ ವಿಂಗಡಿಸಲಾಗಿದೆ.

ಕ್ರಿಮೀನ್ ಬಹುವಿಧಾಕಾರಾನ್ ಕರೋತಿ ವಿವಿಧಾಶ್ರಯಾನ್ |
ಆಮಪಕ್ವಾಶಯೇ ತೇಷಾಂ ಕಫವಿಡ್ಜನ್ಮನಾಂ ಪುನಃ |
ಧಮನ್ಯಾಂ ರಕ್ತಜಾನಾಂ ಚ ಪ್ರಸವಃ ಪ್ರಾಯಶಃ ಸ್ಮೃತಃ |
ಪುರೀಷಕಫರಕ್ತಾನಿ ತಾಸಾಂ ವಕ್ಷ್ಯಾಮಿ ವಿಸ್ತರಮ್ ॥ ಸುಶ್ರುತ.

ಇಷ್ಟೇ ಅಲ್ಲದೆ ಪುರೀಷಕಫಾದಿಸ್ಥಾನಗಳಲ್ಲಿ ಉತ್ಪನ್ನವಾಗುವ ಕ್ರಿಮಿಗಳ ವರ್ಣನೆ ಹಾಗೂ ಅವುಗಳಿಂದುಂಟಾಗುವ ರೋಗಗಳ ಉಲ್ಲೇಖ ಸಹ ಸಿಕ್ಕುತ್ತದೆ. ಯಥಾ:-

**ಮಲೋದ್ಭವ ಕ್ರಿಮಿಗಳು ಮತ್ತು ತಜ್ಜನ್ಯ ರೋಗಗಳು.**

.... .... .... ಬಾಹ್ಯಾಸ್ತತ್ರ ಮಲೋದ್ಭವಾಃ |
ತಿಲಪ್ರಮಾಣ ಸಂಸ್ಥಾನವರ್ಣಾಃ ಕೇಶಾಂಬರಾಶ್ರಯಾಃ |
ಬಹುಪಾದಾಶ್ಚ ಸೂಕ್ಷ್ಮಾಶ್ಚ ಯೂಕಾಲಿಕ್ಷಾಶ್ಚ ನಾಮತಃ |
ದ್ವಿಧಾ ತೇ ಕೋಠಪಿಟಿಕಾ ಕಂಡೂಗಂಡಾನ್ಪ್ರಕುರ್ವತೇ ॥ ಮಾ. ನಿ.

**ಕಫಜಕ್ರಿಮಿಗಳು ಮತ್ತು ತಜ್ಜನ್ಯರೋಗಗಳು.**

ಕಫಾದಾಮಾಶಯೇ ಜಾತಾಃ ವೃದ್ಧಾಃ ಸರ್ಪಂತಿ ಸರ್ವತಃ |
ಪೃಥುಬಧ್ನನಿಭಾಃ ಕೇಚಿತ್ಕೇಚಿದ್ಗಂಡೂಪದೋಪಮಾಃ |
ರೂಢಧಾನ್ಯಾಂಕುರಾಕಾರಾಸ್ತನುದೀರ್ಘಾಸ್ತಥಾಣವಃ |
ಶ್ವೇತಾಸ್ತಾಮ್ರಾವಭಾಸಾಶ್ಚ ನಾಮತಃ ಸಪ್ತಧಾ ತು ತೇ |
ಆಂತ್ರಾದಾಶ್ಚೋದರಾವೇಷ್ಟಾ, ಹೃದಯಾದಾ ಮಹಾಗುದಾಃ |
ಗುರವೋ ದರ್ಭಕುಸುಮಾಃ ಸುಗಂಧಾಸ್ತೇ ಚ ಕುರ್ವತೇ |
ಹೃಲ್ಲಾಸಮಾಸ್ಯಸ್ರವಣಮವಿಪಾಕಮರೋಚಕಂ |
ಮೂರ್ಛಾಛರ್ದಿಜ್ವರಾನಾಹ ಕಾರ್ಶ್ಯಕ್ಷವಥುಪೀನಸಾನ್ ॥ ಮಾ. ನಿ.

2. ದರ್ಭಪುಷ್ಪಾ ಮಹಾಪುಷ್ಪಾ ಪ್ರಲೂನಾಶ್ಚಿಪಿಟಾಸ್ತಥಾ |
ಪಿಪೀಲಿಕಾ ದಾರುಣಾಶ್ಚ ಕಫಕೋಪಸಮುದ್ಭವಾಃ |
ರೋಮಶಾ ರೋಮಮೂರ್ಧಾನಃ ಸಪುಚ್ಛಾಃ ಶ್ಯಾವಮಂಡಲಾಃ |
ರೂಢಧಾನ್ಯಾಂಕುರಾಕಾರಾಃ ಶುಕ್ಲಾಸ್ತೇ ತನವಸ್ತಥಾ |
ಮಜ್ಜಾದಾ ನೇತ್ರಲೇಢಾರಸ್ತಾಲುಶ್ರೋತ್ರಭುಜಸ್ತಥಾ |
ಶಿರೋ ಹೃದ್ರೋಗವಮಥುಪ್ರತಿಶ್ಯಾಯಕರಾಶ್ಚ ತೇ ॥ ಸುಶ್ರುತ.

**ರಕ್ತಜಕ್ರಿಮಿಗಳು ಮತ್ತು ತಜ್ಜನ್ಯರೋಗಗಳು.**

ರಕ್ತವಾಹಿಸಿರಾಸ್ಥಾನಾ ರಕ್ತಜಾ ಜಂತವೋಽಣವಃ ।
ಅಪಾದಾ ವೃತ್ತತಾಮ್ರಾಶ್ಚ ಸೌಕ್ಷ್ಮ್ಯಾತ್ಕೇಚಿದದರ್ಶನಾಃ ।
ಕೇಶಾದಾ ಲೋಮವಿಧ್ವಂಸಾ ಲೋಮದ್ವೀಪಾ ಉದುಂಬರಾಃ ।
ಷಟ್ತೇ ಕುಷ್ಠೈಕಕರ್ಮಾಣಃ ಸಹಸೌರಸಮಾತರಃ ॥ ಚ. ವಿ.

ವೃತ್ತ, ಅಣವಃ ಇತ್ಯಾದಿ ಶಬ್ದಗಳು ಈ ಕ್ರಿಮಿಗಳ ಆಕಾರವನ್ನು, ತಾಮ್ರ ಎಂಬುದು ಬಣ್ಣವನ್ನು ಸೂಚಿಸುತ್ತದೆ.

ಕೇಶರೋಮನಖಾದಾಶ್ಚ ದಂತಾದಾಃ ಕಿಕ್ಕಿಶಾಸ್ತಥಾ ।
ಕುಷ್ಠಜಾಃ ಸಪರೀಸರ್ಪಾ ಜ್ಞೇಯಾಃ ಶೋಣಿತಸಂಭವಾಃ ।
ತೇ ಸರಕ್ತಾಶ್ಚ ಕೃಷ್ಣಾಶ್ಚ ಸ್ನಿಗ್ಧಾಶ್ಚ ಪೃಥವಸ್ತಥಾ । ಸು. ಉ. ತ.

**ಪುರೀಷಜಕ್ರಿಮಿಗಳು ಮತ್ತು ತಜ್ಜನ್ಯರೋಗಗಳು.**

ಪಕ್ವಾಶಯೇ ಪುರೀಷೋತ್ಥಾ ಜಾಯಂತೇಽಧೋವಿಸರ್ಪಿಣಃ ।
ವೃದ್ಧಾಸ್ತೇ ಸ್ಯುರ್ಭವೇಯುಶ್ಚ ತೇ ಯದಾಽಽಮಾಶಯೋನ್ಮುಖಾಃ ।
ತದಾಽಸ್ಯೋದ್ಗಾರನಿಶ್ವಾಸಾ ವಿಡ್ಗಂಧಾನುವಿಧಾಯಿನಃ ।
ಪೃಥುವೃತ್ತತನುಸ್ಥೂಲಾಃ ಶ್ಯಾವಪೀತಸಿತಾಸಿತಾಃ ।
ತೇ ಪಂಚ ನಾಮ್ನಾ ಕ್ರಿಮಯಃ ಕಕೇರುಕಮಕೇರುಕಾಃ ।
ಸೌಸುರಾದಾಃ ಸಲೂನಾಖ್ಯಾ ಲೇಲಿಹಾ ಜನಯಂತಿ ಚ ।
ವಿಡ್ಭೇದಶೂಲವಿಷ್ಟಂಭಕಾರ್ಶ್ಯಪಾರುಷ್ಯಪಾಂಡುತಾಃ ।
ರೋಮಹರ್ಷಾಗ್ನಿಸದನಗುದಕಂಡೂರ್ವಿನಿರ್ಗಮಾಃ । ಚ. ವಿ.
ಶೂಲಾಗ್ನಿಮಾಂದ್ಯಪಾಂಡುತ್ವಂ ವಿಷ್ಟಂಭಬಲಸಂಕ್ಷಯಾಃ ।
ಪ್ರಸೇಕಾರುಚಿಹೃದ್ರೋಗವಿಡ್ಭೇದಾಸ್ತು ಪುರೀಷಜಾಃ ॥ ಸು. ಉ. ತ.

ಆಧುನಿಕ ವಿಜ್ಞಾನಿಗಳು ಮನುಷ್ಯನ ರಕ್ತ, ಮಲ ಮೂತ್ರ ಮತ್ತು ಶ್ಲೇಷ್ಮ ಇವುಗಳಲ್ಲಿ ರೋಗಕಾರಕ ಕ್ರಿಮಿಗಳಿರುತ್ತವೆಂಬುದನ್ನು ಕಂಡುಹಿಡಿದುದಕ್ಕಾಗಿ ಅಹಂಕಾರಪಡಬಹುದು. ಆದರೆ ಈಗಿನ ಆಧುನಿಕ ಸಾಧನಗಳ ಸಹಾಯವಿಲ್ಲದಿದ್ದಾಗ್ಯೂ ನಮ್ಮ ಹಿಂದಿನ ಆಚಾರ್ಯರು ಈ ಸ್ಥಳಗಳಲ್ಲಿ ಬೇರೆ ಬೇರೆ ತರಹದ ಕ್ರಿಮಿಗಳ ಇರುವಿಕೆಯನ್ನೂ ಅವುಗಳಿಂದ ಉಂಟಾಗುವ ನಾನಾತರಹದ ರೋಗಗಳನ್ನೂ, ಎರಡು ಸಾವಿರಾರು ವರ್ಷಗಳ ಹಿಂದೆಯೇ ಕಂಡುಹಿಡಿದಿದ್ದರೆಂಬುದು ಯಾರನ್ನಾದರೂ ಆಶ್ಚರ್ಯಚಕಿತರನ್ನಾಗಿ ಮಾಡದಿರದು. ಇಷ್ಟೇ ಅಲ್ಲದೆ,

ಪ್ರಸಂಗಾತ್ ಗಾತ್ರಸಂಸ್ಪರ್ಶಾನ್ನಿಶ್ವಾಸಾತ್ಸಹಭೋಜನಾತ್ ।
ಏಕಶಯ್ಯಾಸನಾಚ್ಚೈವ ವಸ್ತ್ರಮಾಲ್ಯಾನುಲೇಪನಾತ್
ಕುಷ್ಠಂ ಜ್ವರಶ್ಚ ಶೋಷಶ್ಚ ನೇತ್ರಾಭಿಷ್ಯಂದ ಏವ ಚ

ಔಪಸರ್ಗಿಕರೋಗಾಶ್ಚ ಸಂಕ್ರಾಮಸ್ತಿ ನರಾನ್ನರಂ ॥ ಸು. ನಿ. ಅ. ೫
ಪ್ರಸಂಗದಿಂದ ಉಪದಂಶಾದಿ ರೋಗಗಳು, ರೋಗಿಯ ಶರೀರಸ್ಪರ್ಶನದಿಂದ ಕುಷ್ಠಾದಿಗಳು, ರೋಗಿಯ ನಿಶ್ವಾಸಸೇವನೆಯಿಂದ ಶ್ಲೈಷ್ಮಿಕಜ್ವರ, (Influenga) ಯಕ್ಷ್ಮಾದಿಗಳು, ಸಹಭೋಜನ, ಏಕಶಯ್ಯಾ, ವಸ್ತ್ರಾದಿಲೇಪನಗಳಿಂದ ಯಕ್ಷ್ಮ, ಕುಷ್ಠ, ಜ್ವರ ಇತ್ಯಾದಿರೋಗಗಳು ಹಾಗೂ ಇತರೆ ಸಾಂಕ್ರಾಮಿಕ ರೋಗಗಳು ಒಬ್ಬರಿಂದ ಇನ್ನೊಬ್ಬರಿಗೆ ಹರಡುತ್ತವೆಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ.

ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ರೋಗಗಳ ಪೈಕಿ ಕುಷ್ಠ, ಜ್ವರ, ಕ್ಷಯ, ನೇತ್ರಾಭಿಷ್ಯಂದ ಇವು ಮಾತ್ರವಲ್ಲದೆ ಇತರೆ ರೋಗಗಳನ್ನು ಸಹ ತಿಳಿಯಬೇಕೆಂದು, ರೋಗಾಶ್ಚ ಎಂಬ ಶಬ್ದದ ವ್ಯಾಖ್ಯೆಯನ್ನು ಬರೆಯುವಾಗ ಡಲ್ಹಣಾಚಾರ್ಯರು ಸ್ಪಷ್ಟೀಕರಿಸಿದ್ದಾರೆ.-

ಮಸೂರಿಕಾಶ್ಚ ರೋಮಾಂತ್ಯೋ ಗ್ರಂಥಿವೀಸರ್ಪ ಏವ ಚ |
ಉಪದಂಶಃ ಕಂಠಬಾಧಾ ಔಪಸರ್ಗಿಕಸಂಜ್ಞಕಾಃ |

(ಮುಂದುವರಿಯುವದು)

---

## ಜ್ವರದಲ್ಲಿ ಅಂಟವಾಳಕಾಯಿಯ ಉಪಯೋಗವು

——00——

ಮಂಜುಗಡ್ಡೆ ಮತ್ತು ಕೋಲನ (Cologne) ವಾಟರದ ಕಾರ್ಯವನ್ನು ಅಂಟವಾಳಕಾಯಿಯು (ಫನಿಲ್:-ಅರಿಷ್ಟ) ಮಾಡುತ್ತದೆ.

ಜ್ವರದಲ್ಲಿ ಇದರ ಉಪಯೋಗವು ಚೆನ್ನಾಗಿ ಆಗುತ್ತದೆ. ಜ್ವರವು ಏರುತ್ತ ೧೦೩ ಡಿಗ್ರಿಯಿಂದ ೧೦೫ ಡಿಗ್ರಿಗಳವರೆಗೆ ಅಥವಾ ಇನ್ನೂ ಹೆಚ್ಚಿದಾಗ ಮಿದುಳು ಮತ್ತು ಮಜ್ಜಾತಂತುಗಳು ಕಾದು, ದಾಹ, ಮೂರ್ಛೆ, ಬಡಬಡಿಸುವುದು ಮುಂತಾದ ಲಕ್ಷಣಗಳಾಗುತ್ತವೆ. ಆ ಕಾಲಕ್ಕೆ ಅಂಟವಾಳಕಾಯಿಯ ನೊರೆಯಲ್ಲಿ ಬಟ್ಟೆಯನ್ನು ನೆನಸಿ ಅದರ ಪುಡಿಕೆಯನ್ನು ಮಾಡಿ ಹಣೆಗೆ ಹಾಕಬೇಕು. ಮತ್ತು ಮೇಲಿಂದ ಮೇಲೆ ನೊರೆಯನ್ನು ಆ ಬಟ್ಟೆಯ ಮೇಲೆ ಹಾಕುತ್ತಿರಬೇಕು. ಅಥವಾ ಕೇವಲ ನೊರೆಯೊಂದನ್ನೇ ಹಣೆಗೂ ಹಚ್ಚಬಹುದು.

ಜ್ವರದ ಪಿತ್ತಪ್ರಧಾನ ಅವಸ್ಥೆಯಲ್ಲಾಗಲೀ ಅಥವಾ ಸನ್ನಿಪಾತಾವಸ್ಥೆಯಲ್ಲಾಗಲೀ ಇರುವ ಕಾಲಕ್ಕೆ ಮಂಜುಗಡ್ಡೆಯಂತೆಯೇ ನಿರ್ಭಯವಾಗಿ ಈ ಅಂಟವಾಳಕಾಯಿಯನ್ನು ಉಪಯೋಗಿಸಬಹುದು.

ಫೇನೇನಾರಿಷ್ಟಜೇನ ವಾ॥
ಲಿಪ್ತೇಂಗೇ ದಾಹರುಕ್ ಮೋಹ ಛರ್ದಿಸ್ತೃಷ್ಣಾಚ ಶಾಮ್ಯತಿ॥
ಅ. ಹೃ. ಚಿ. ಅ. ೧. ಶ್ಲೋ ೧೩೩.

ಇದನ್ನು ಅಷ್ಟಾಂಗ ಹೃದಯದ ಜ್ವರ ಚಿಕಿತ್ಸೆಯಲ್ಲಿ ಹೇಳಿರುತ್ತಾರೆ.

ಅಂಟುವಾಳಕಾಯಿಯ [illegible]
ದೇಹಕ್ಕೆ ಲೇಪಿಸಿದರೆ [illegible]
ತ್ತವೆ.

ವಿಷಮ ಜ್ವರದಲ್ಲಿ ಜ್ವರದ ವೇಗವು [illegible] ಏರಿ, ದಾಹ, ಮೋಹ, ಬಡ ಬಡಿಸುವುದು, [illegible] ಔಷಧಗಳ ಜೊತೆಗೆ ಈ ಅಂಟುವಾಳಕಾಯಿಯ [illegible] ಮಾಡಲಾಗಿತ್ತು. [illegible] ಕಾಲಕ್ಕೆ ಸಹ ಇದರ ಉಪಯೋಗದಿಂದ [illegible] ಬಡ ಬಡಿಸುವುದು, [illegible]

ಸನ್ನಿಪಾತ ಜ್ವರದ ಮೇಲೆ [illegible] ಹೆಚ್ಚಿಗೆ ಹೋದಾಗ ಇದರ ಉಪಯೋಗದಿಂದ ಲಾಭ ದೊರೆತಿದೆ.

[ಶ್ರೀ ನೀಲಕಂಠಭಾವೆ, ಆಯುರ್ವೇದ ಭೂಷಣ, ಇವರ ಲೇಖನವು [illegible] ಭವಿದು. ಆದರೆ ಅಂಟುವಾಳದಕಾಯಿಯ [illegible] ಹೇಳಿರುತ್ತದೆ. ಇದು ಮಂಜುಗಡ್ಡೆಯ ಕೆಲಸವನ್ನು [illegible] ವನ್ನು ಹೇಗೆ ಮಾಡುವುದು? ಅಂಟುವಾಳಕಾಯಿಯು [illegible] ತ್ತದೆ. ಆದುದರಿಂದ ವಾತಾನುಲೋಮನವಾಗಿ [illegible] ಕಾಣುತ್ತದೆ. ವೈದ್ಯರುಗಳು ಈ ಅಂಟುವಾಳಕಾಯಿಯನ್ನು [illegible] ಮತ್ತು ಉಪಯೋಗ ಮಾಡಿ ಅನುಭವ ಪೂರ್ವಕ ಲೇಖನಗಳನ್ನು ಬರೆದು ಕಳುಹಿಸಬಹುದು. ಸಂ]

---

## ಸಾದರ ಸ್ವೀಕಾರ ಮತ್ತು ವಿಮರ್ಶೆ

## ಬಸರಿ ಮತ್ತು ಬಾಣಂತಿತನದ ಕೈಪಿಡಿ

**ಲೇಖಕರು:**—ಆಯುರ್ವೇದ ಸಿದ್ಧಾಂತ [illegible] ಎ. ಎಸ್. ಸುಬ್ರಹ್ಮಣ್ಯ ಶಾಸ್ತ್ರೀ, ಎಲ್.ಎಂ.ಪಿ. ಮೈಸೂರು. ಕ್ರೌನ್ 4+14+42 ಪುಟಗಳು. ಬೆಲೆ: ಸಾದಾ 1—0—0 [illegible] 1—8—0 ಬಸರಿ ಮತ್ತು ಬಾಣಂತಿತನದ ಕೈಪಿಡಿ ಎಂಬ ಪುಟ್ಟ ಪುಸ್ತಕವನ್ನು ಬರೆದು ಲೇಖಕರು ಕನ್ನಡ ವೈದ್ಯಕೀಯ ಸಾಹಿತ್ಯಕ್ಕೆ ಮಹದುಪಕಾರ ಮಾಡಿದ್ದಾರೆ.

ಪುಸ್ತಕಕ್ಕೆ ವೈದ್ಯಗುರು ಭಾಸ್ಕರಾಚಾರ್ಯ ರಾಮಚಂದ್ರಸ್ವಾಮಿಗಳು ಯುಕ್ತಿಯುಕ್ತವಾದ ಮುನ್ನುಡಿಯನ್ನು ಬರೆದಿರುವರು. ಶ್ರೀ ಶಾಸ್ತ್ರಿಗಳ 'ವಿಜ್ಞಾಪನೆ' ಎಂಬ ಪೀಠಿಕಾ ಭಾಗವು ವಿಚಾರ ಪೂರಿತವಾಗಿರುವುದು.

ಪುಸ್ತಕವು ಪುಟ್ಟದಾದರೂ ಬಸರಿ ಮತ್ತು ಬಾಣಂತಿತನದ ಎಲ್ಲಾ ಚಿಕಿತ್ಸೆಗಳನ್ನೂ ಸಂಕ್ಷೇಪವಾಗಿ ಒಟ್ಟುಗೂಡಿಸಿ ಬರೆದಿದ್ದಾರೆ. ಯನ್ತ್ರ ಮನ್ತ್ರಗಳ ಉಲ್ಲೇಖವನ್ನೂ ಅಲ್ಲಲ್ಲಿ ಮಾಡಿರುತ್ತಾರೆ

ಮೂಢಗರ್ಭ ಮತ್ತು ಸೂತಿಕಾವಾಯುಗಳ ಚಿಕಿತ್ಸೆಗಳನ್ನು ಸ್ವಲ್ಪ ಹೆಚ್ಚು ವಿವರಿಸಿದ್ದರೆ ಉತ್ತಮವಿತ್ತು.

ಪ್ರಾಯಶಃ ಆಯುರ್ವೇದ ಶಾಸ್ತ್ರವನ್ನು ಓದಿದನಂತರ ಅಲೋಪತಿಯನ್ನು ಓದಿದವರಿಗೆ ಕಾಲಕ್ರಮದಲ್ಲಿ ಆಯುರ್ವೇದದಲ್ಲಿ ತಿರಸ್ಕಾರವು ಉಂಟಾಗಿ ಅವರು ಅದನ್ನು ಅವಹೇಳನ ಮಾಡುವ ಧ್ಯೇಯವುಳ್ಳವರಾಗುತ್ತಾರೆ. ಇಂಥಾ ಪರಿಸ್ಥಿತಿಯಲ್ಲಿ ಶ್ರೀ|| ಶಾಸ್ತ್ರಿಗಳು ಅಲೋಪತಿಯ ಬಳಿಗೆ ಬೀಳದೇ ಆಯುರ್ವೇದ ಪದ್ಧತಿಯನ್ನೇ ಸಶಾಸ್ತ್ರೀಯವಾಗಿ ಅವಲಂಬಿಸಿ ಮುನ್ನುಗ್ಗುತ್ತಿರುವುದು ಅಭಿನಂದನೀಯವು. ಒಟ್ಟಿನಲ್ಲಿ ಹೇಳುವುದಾದರೆ ಪುಸ್ತಕವು ಸಂಗ್ರಾಹ್ಯವಾದುದು.

---

# ಸುವರ್ಣ

—oo—

**ಬರೆದವರು: ಡಾ|| ಯ್. ಆರ್. ಭಟ್. ನೆಲ್ಲಿಕಾರ್‌ರವರು,**

**ವಿವಿಧಭಾಷೆಗಳಲ್ಲಿರುವ ರೂಢನಾಮ.**

| | |
|---|---|
| ಸಂಸ್ಕೃತ—ಸ್ವರ್ಣ | ತೆಲುಗು—ಬಶರಂಗ್ |
| ಹಿಂದಿ—ಸೋನಾ | ಪರ್ಶಿಯಾ—ತಿಲಾ |
| ಮರಾಠಿ—ಸೋನೆ | ಅರೇಬಿಯನ್—ಜಾರ್ |
| ಗುಜರಾತಿ—ಸೋನು | ಲೆಟಿನ್—ಜೌರಂ |
| ಕನ್ನಡ—ಬಂಗಾರ | ಇಂಗ್ಲೀಷ್—ಗೋಲ್ಡ್ |

**ಶುದ್ಧಿಮಾಡುವ ವಿಧಾನ.**

ಬಂಗಾರದಲ್ಲಿ ತಾಮ್ರ, ಬೆಳ್ಳಿ ಮಿಶ್ರವಾಗಿರಬಾರದು. ಕೆಂಪಾಗಿದ್ದು ಬೆಂಕಿಗೆ ಹಾಕಿ ತೆಗೆದು ತಿಕ್ಕಿದಾಗ ಕೇಸರಿಯ ಬಣ್ಣವಿರಬೇಕು. ಬಂಗಾರವನ್ನು ಪ್ರಸಿದ್ಧ ಆಯುರ್ವೇದ ಗ್ರಂಥಗಳಲ್ಲಿ ಬೇರೆ, ಬೇರೆ ರೀತಿಯಾಗಿ ಶುದ್ಧಿಮಾಡಲು ಹೇಳಿರುವರು. ಬಂಗಾರವನ್ನು ತಗಡುಗಳನ್ನಾಗಿ ಮಾಡಿ ಬೆಂಕಿಯಲ್ಲಿ ಹಾಕಿ ಕಾಂಜಿಕದಿಂದ ಮುಳುಗಿಸಿ ತೆಗೆದರೆ ಶುದ್ಧಿಯಾಗುವುದು. ಅಥವಾ ಎಣ್ಣೆ, ಆಕಳ ಮೂತ್ರ, ಮಜ್ಜಿಗೆ, ಹುರುಳಿಕಷಾಯ ಇವುಗಳಲ್ಲಿ ಒಂದೊಂದು ಸಲ ಮುಳುಗಿಸಿ ತೆಗೆದರೆ ಶುದ್ಧಿಯಾಗುವುದು.

೨ ತೊಲೆ ಬಂಗಾರದ ಅದರಷ್ಟು ಉಪ್ಪು ಸೇರಿಸಿ ... ಹಾಕಿ ೬ ಪುಟ ಕೊಟ್ಟರೆ ಶುದ್ಧವಾಗುವುದು.

**ಭಸ್ಮಮಾಡುವ ವಿಧಾನ** (ರಸೇಂದ್ರಸಾರ ಸಂಗ್ರಹ)

೧ ತೊಲ ಬಂಗಾರದ ಅದರಷ್ಟೇ ಪಾದರಸ ಸೇರಿಸಿ ... ಸಿಂಪಿಹುಲ್ಲಿನ ರಸದಿಂದ ಮರ್ದನ ಮಾಡಿ, ಬಿಲ್ಲೆಗಳನ್ನಾಗಿ ಮಾಡಿ, ಆ ಬಿಲ್ಲೆಗಳಷ್ಟು ಗಂಧಕವನ್ನು ಅರೆದು, ಬಿಲ್ಲೆಯ ಮೇಲೂ ಮತ್ತು ಕೆಳಗೂ ಹಾಕಿ ಆ ಬಿಲ್ಲೆಗಳನ್ನು ಒಂದು ಮೂಸೆಯಲ್ಲಿಟ್ಟು ೩೦ ಬೆರಣಿಗಳಿಂದ ೧೪ ಪುಟ ಕೊಟ್ಟರೆ ಬಂಗಾರವು ಭಸ್ಮವಾಗುವುದು.

**ಶುದ್ಧಭಸ್ಮದ ಲಕ್ಷಣ**:— ಕೆಂದು ಬಣ್ಣದ ಭಸ್ಮವಾಗಬೇಕು. ಇದು ಸರಿಯಾಗಿ ಭಸ್ಮವಾದಾಗ ಯಾವ ರೀತಿಯಿಂದಲೂ ಪುನಃ ಬಂಗಾರದ ಬಣ್ಣಕ್ಕೆ ಬರಲಾರದು.

**ಬಂಗಾರದ ಗುಣ**:—(ಮದನಪಾಲ) "ಸುವರ್ಣಂ ಶೀತಲಂ ಸ್ನಿಗ್ಧಂ ಬಲ್ಯಂ ಗುರುರಸಾಯನಂ। ಕಾಂತಿಕರಂ ವಿಷೋನ್ಮಾದ ತ್ರಿದೋಷ ಜ್ವರಶೋಷಜಿತ್। ಕಷಾಯ ತಿಕ್ತ ಮಧುರಂ ಸುವರ್ಣಂ ಗುರುಲೇಖನಂ॥" ಬಂಗಾರ ತಂಪಾಗಿ, ಶುಕ್ರವರ್ಧಕವಾಗಿ, ಶಕ್ತಿದಾಯಕವಾಗಿ, ಜೀರ್ಣಕ್ಕೆ ಕಷ್ಟಕರವಾಗಿ ರಸಾಯನವಾಗಿದೆ. ಆಯುಷ್ಯವರ್ಧಕ, ಕಾಂತಿದಾಯಕವಾಗಿದೆ. ಜ್ವರ, ಕ್ಷಯ, ಉನ್ಮಾದ ರೋಗಗಳನ್ನು ಗುಣಪಡಿಸುತ್ತದೆ. ಮಧುರ, ತಿಕ್ತ, ಕಷಾಯರಸದಿಂದ ಕೂಡಿದೆ.

**ರಸರತ್ನಸಮುಚ್ಚಯದಲ್ಲಿ ಇನ್ನೂ ಕೆಲವು ಗುಣಗಳನ್ನು ವರ್ಣಿಸಿದ್ದಾರೆ.**

ಆಯುಷ್ಯಪ್ರದ, ಬುದ್ಧಿಪ್ರದ, ಜ್ಞಾನಶಕ್ತಿವರ್ಧಕವಾಗಿದೆ. ಅಲ್ಲದೆ ಭೂತ ಪ್ರೇತ ಹಿಡಿದ, ಹಿಸ್ಟೀರಿಯಾ, ಅಪಸ್ಮಾರ, ಭೂತೋನ್ಮಾದಗಳಲ್ಲಿ ಗುಣಕಾರಿಯಾಗಿದೆ. ಅಲ್ಲದೆ ಇದು ವೀರ್ಯವರ್ಧಕವಾಗಿಯೂ ಇದೆ. ಇದು ತಂಪು ಮಾಡುವಂತಹದಾಗಿರುವುದರಿಂದಲೂ, ವಿಷನಾಶಕವಾಗಿರುವುದರಿಂದಲೂ, ದೇಹದಲ್ಲಿರುವ ವಿಷ ಹೊರಗೆ ಹಾಕಲು ಸಹಾಯಕಾರಿಯಾಗಿದೆ. ಉತ್ತಮ ರಸಾಯನವಾಗಿದ್ದು, ಕ್ಷಯರೋಗ, ಹುಚ್ಚು, ಬುದ್ಧಿ ಬೆಳೆಯದೆ ಇರುವುದು ಇವನ್ನು ನಿವಾರಿಸುವುದು, ಜೀರ್ಣಶಕ್ತಿಯನ್ನು ಬೆಳೆಸುವಂಥಾದ್ದಾಗಿದೆ.

ಗೋಪಾಲಭಟ್ಟರೆಂಬಾಚಾರ್ಯರು ಇದರ ವಿಷಯವಾಗಿ ಹೀಗೆಂದು ಹೇಳಿದ್ದಾರೆ:— "ಕಷಾಯತಿಕ್ತಮಧುರಂ ಸುವರ್ಣಂ ಗುರು ಲೇಖನಂ। ಹೃದ್ಯಂ ರಸಾಯನಂ ಬಲ್ಯಂ ಚಕ್ಷುಷ್ಯಂ ಕಾಂತಿದಂ ಶುಚಿ॥ ಆಯುರ್ಮೇಧಾವಯಃಸ್ಥೈರ್ಯ ವಾಗ್ವಿಶುದ್ಧಿಸ್ಮೃತಿಪ್ರದಂ। ಕ್ಷಯೋನ್ಮಾದಗರಾನಾಂಚ ಕುಷ್ಠಾನಾಂ ನಾಶನಂ ಪರಂ॥" ಇಲ್ಲಿ ಮೇಲೆ ಹೇಳಿದ ಗುಣಗಳಲ್ಲದೆ ಬಂಗಾರವು ಹೃದ್ಯ (Heart Tonic) ಅಲ್ಲದೆ ದೃಷ್ಟಿಮಾಂದ್ಯವನ್ನು ಗುಣಪಡಿಸುತ್ತದೆ ಮತ್ತು ಕುಷ್ಠನಾಶಕವೆಂದಿದ್ದಾರೆ.

ವಾಗ್ಭಟಾಚಾರ್ಯರು ವಿಶೇಷವಾಗಿ ಬಂಗಾರವನ್ನು ವಿಷರೋಗದಲ್ಲಿ ಉಪಯೋಗಿಸಿದ್ದು ಕಂಡುಬರುವುದು—"**ಗರೇಷು ಹೇಮಂ**" ಎಂದಿದ್ದಾರೆ.

೨೮. **ಸಮುಚ್ಚಯ**:—ಬಂಗಾರಭಸ್ಮವನ್ನು ¼ ಗ್ರೈನ್ ಪ್ರಮಾಣದಲ್ಲಿ ಜೇನ್ಣ ಯಾ ಮೆಣಸಿನಕಾಳಿನ ಚೂರ್ಣದೊಂದಿಗೆ ಸೇರಿಸಿ, ಸೇವಿಸಿದರೆ ಈ ಕೆಳಗಿನ ರೋಗಗಳು ಗುಣವಾಗುವುವೆಂದು ಬರೆದಿರುವುದು—

ಕ್ಷಯ, ಅಗ್ನಿಮಾಂದ್ಯ, ಹಳೆಯ ಅತಿಸಾರ, ಉಬ್ಬಸ, ಕಫ, ಅರುಚಿ, ಕಾಮಿಲೆ, ಎಲ್ಲಾ ತರಹದ ವಿಷಗಳು, ಅಲ್ಲದೆ ಶುಕ್ರ ಮತ್ತು ಮಜ್ಜಗಳನ್ನು ಬೆಳೆಸಿ ದೇಹದ ಕಾಂತಿ, ಶಕ್ತಿ, ಬಲ, ಧೈರ್ಯ ಮತ್ತು ಬುದ್ಧಿ, ಸ್ಮರಣಶಕ್ತಿಯನ್ನು ಬೆಳೆಸುವುದಾಗಿದೆ.

## ಬಂಗಾರದ ಭಸ್ಮಸೇವನೆ ಮತ್ತು ಅದರ ಅನುಪಾನ.

೧. ರಸಾಯನಕ್ಕಾಗಿ:—ಬಂಗಾರದ ಭಸ್ಮವನ್ನು ತಾವರೆಬೀಜದ ಚೂರ್ಣದೊಂದಿಗೆ ಸೇವಿಸಬೇಕು. ಇದರ ಭಸ್ಮವನ್ನು ಆಯುರ್ವೇದದಲ್ಲಿ ಶಕ್ತಿದಾಯಕವಾಗಿ ಉಪಯೋಗಿಸಿದ್ದಾರೆ. ಮೇಲಿನಂತೆ ಇದು ಬುದ್ಧಿವರ್ಧಕ, ಶಕ್ತಿವರ್ಧಕ, ಕಾಮೋತ್ತೇಜಕವಾಗಿದೆ. ಇದಕ್ಕಾಗಿ ಪ್ರಖ್ಯಾತವಾದಂತಹ ಮಕರಧ್ವಜವೆಂಬ ಬಂಗಾರದಿಂದಲೇ ತಯಾರು ಮಾಡಿದ ವಸ್ತುವನ್ನು ಸೇವಿಸುತ್ತಾರೆ.

೨. ಬಂಗಾರವನ್ನು ಸಣ್ಣ ಮಕ್ಕಳಿಗೆ (ಹುಟ್ಟಿದ ಕೆಲವು ದಿವಸಗಳಲ್ಲಿ) ಕೊಡುತ್ತಾರೆ. ಕಾರಣ ಮುಗುಪಿನ ಶಕ್ತಿ, ಸ್ಮರಣಶಕ್ತಿ ಮತ್ತು ಕಾಂತಿವರ್ಧಕವಾಗಲೆಂದು. ೩. ದೃಷ್ಟಿಮಾಂದ್ಯದಲ್ಲಿ ಬಂಗಾರದ ಭಸ್ಮವನ್ನು ಪುನರ್ನವದ ರಸದಲ್ಲಿ ಕೊಡಬೇಕು. ೪. ಎಲ್ಲಾ ತರಹದ ವಿಷಗಳಲ್ಲಿ ಸಿರ್ವಿಶದ ರಸದಲ್ಲಿ ಕೊಡಬೇಕು. ೫. ಹುಚ್ಚುರೋಗದಲ್ಲಿ (Insanity) ಕಾಳುಮೆಣಸು ಚೂರ್ಣ, ಒಣಶುಂಠಿ ಚೂರ್ಣದಲ್ಲಿ ಕೊಡಬೇಕು. ೬. ರಸಾಯನಕ್ಕಾಗಿ, ಜೇನ್ನು, ಹಾಲಿನ ಕೆನೆ, ಹಾಲಿನೊಂದಿಗೆ ಸೇವನೆ. ೭. ಕಾಮೋತ್ತೇಜಕವಾಗಿ ಹಾಲು ಮತ್ತು ಕಲ್ಲುಸಕ್ಕರೆಯೊಂದಿಗೆ ಸೇವನೆ. ೮. ಕಾಂತಿವರ್ಧಕವಾಗಿ ಕುಂಕುಮಕೇಸರಿಯೊಂದಿಗೆ ಸೇವನೆ. ೯. ಬುದ್ಧಿ ಮತ್ತು ಸ್ಮರಣಶಕ್ತಿ ವರ್ಧನಕ್ಕಾಗಿ ಬಜೆ ಚೂರ್ಣದೊಂದಿಗೆ ಸೇವನೆ. ೧೦. ಶಕ್ತಿದಾಯಕವಾಗಿ ಭೃಂಗರಾಜರಸದಲ್ಲಿ ಸೇವನೆ. ೧೧. ಹೃದ್ಯವಾಗಿ (Heart Tonic) ಹಾಲು, ಅರ್ಜುನತೊಗಟೆ ಚೂರ್ಣ, ಸಕ್ಕರೆ ಹಾಲಿನೊಂದಿಗೆ. ೧೨. ದಾಹನಾಶಕವಾಗಿ ಮೀನಿನ ಪಿತ್ತದೊಂದಿಗೆ. ೧೩. ಕ್ಷಯನಾಶಕವಾಗಿ ವೀಳ್ಯದೆಲೆರಸ, ಬೆಳ್ಳುಳ್ಳಿರಸದಲ್ಲಿ ಸೇವನೆ.

**ಇದನ್ನು ಸೇವಿಸುವಾಗ ಇರಬೇಕಾದ ಜಾಗ್ರತೆ.**

[illegible] **ಹೋಗುವುದು ಈ** [illegible]

## ಉಪಸಂಹಾರ

ಈ ಲೇಖನದ ಎಲ್ಲಾ [illegible] ಬಂಗಾರದ [illegible] ರಲ್ಲಿ Koch ಎಂಬುವನು [illegible] ಜೊತೆಗೆ ಬಂಗಾರದಿಂದ ಮಾಡಿದ ಔಷಧಗಳು [illegible] ಉದಾ:—[illegible] ಮಯೋಕ್ಲೈಸಿಸ್ ಮುಂತಾದವುಗಳು. ಬಂಗಾರ [illegible] ವೀರ್ಯವರ್ಧಕ, ಕಾಂತಿಕಾರಕ, ಬುದ್ಧಿ, ಸ್ಮೃತಿ, ರಸಾಯನ, ಪಿತ್ತಘ್ನ, [illegible] ನಾಶಕ, ಬಲಪ್ರದ, [illegible] ವರ್ಧಕ, ಕ್ಷಯನಾಶಕ, [illegible] ಮುಂತಾದ ರೋಗಗಳನ್ನು ಗುಣಪಡಿಸುತ್ತದೆಂದು ಪ್ರಸಿದ್ಧವಾಗಿದೆ.

ಅದೂ ಅಲ್ಲದೆ ಇದು [illegible] ಬಂಗಾರದ ಭಸ್ಮವನ್ನು ಸೇವಿಸಿದಾಗ ಅದು [illegible] ಧಾತುಗಳನ್ನು ಹೊಕ್ಕು ಶುಕ್ರದವರೆಗೆ ಸೇರಿ [illegible] ವೃದ್ಧಿಮಾಡುತ್ತದೆ. ಆದಕಾರಣ [illegible] ಬಂಗಾರ ಬದ್ದಿರುವ ಯೋಗಗಳನ್ನು ಹೇಳುತ್ತಾರೆ. ಉದಾ:— **ಮಕರಧ್ವಜ, ಪೂರ್ಣಚಂದ್ರರಸ,** ಬೃಹತ್ ವಂಗೇಶ್ವರ, ಬೃಹತ್ [illegible]

## ಬಂಗಾರ ಬದ್ದಿರುವ ಕೆಲವು ಯೋಗಗಳು

**ಜ್ವರ ಮುಂತಾದವುಗಳಲ್ಲಿ ಉಪಯೋಗಿಸುವ ಯೋಗಗಳು.**

ಜ್ವರ:—ಕಸ್ತೂರಿಭೈರವರಸ, ಸನ್ನಿಪಾತಸೂರ್ಯ, ತ್ರೈಲೋಕ್ಯಚಿಂತಾಮಣಿರಸ, ಜಯಮಂಗಳರಸ.

ಅತಿಸಾರ ಮತ್ತು ರಕ್ತಾತಿಸಾರ:—ವಿಜಯಪರ್ಪಟಿ, ಸ್ವರ್ಣಪರ್ಪಟಿ, ಗ್ರಹಣೀವಜ್ರಕಪಾಟ, ಹಿರಣ್ಯಗರ್ಭಪೋಟ್ಟಲೀರಸ

ಮೂಲವ್ಯಾಧಿಯಲ್ಲಿ :—ತೀಕ್ಷ್ಣಮುಖರಸ. ಕನಕಸುಂದರರಸ.

ಅಜೀರ್ಣ ಅಗ್ನಿಮಾಂದ್ಯ :— ಕನಕಸುಂದರರಸ.

ವಿದ್ರಧಿಯಲ್ಲಿ :— ತ್ರಿನೇತ್ರರಸ.

ಜಲೋದರ :— ಪಂಚಾನನರಸ.

ಕುಷ್ಠರೋಗದಲ್ಲಿ :— ಕನಕಸುಂದರರಸ, ಸರ್ವೇಶ್ವರರಸ.

ವಾತರೋಗದಲ್ಲಿ :— ಚತುಗ್ಗುಧಾರಸ, ಪ್ರಭಾವತಿಗುಟಿಕಾ, ಬೃಹತ್‌ವಾತ ಗಜಾಂಕುಶ, ವಾತನಾಶನರಸ, ವಾತಕಂಟಕರಸ, ಚಿಂತಾಮಣಿರಸ, ಚತುರ್ಮುಖ ರಸ, ತ್ರೈಲೋಕ್ಯಚಿಂತಾಮಣಿರಸ, ಯೋಗೇಂದ್ರರಸ, ಚಿಂತಾಮಣಿಚತುರ್ಮುಖ.

ವಂಧ್ಯತ್ವದಲ್ಲಿ :—(ಗ. ರತ್ನ) ಜಯಸುಂದರ, ಧೃತಿಸಾರ, ರತ್ನಪ್ರಭಾ (ಭೈರ) ಕಾಮದೇವರಸ, ಮದನಸಂಜೀವಿನಿ, ಪುಷ್ಪಧನ್ವರಸ, ರಸೇಂದ್ರಚೂಡಾಮಣಿರಸ, ಬೃಹತ್ಪೂರ್ಣಚಂದ್ರರಸ, ಚಂದ್ರೋದಯರಸ, ಮಕರಧ್ವಜ, ವಸಂತಕುಸುಮಾಕರ ರಸ, ವಸಂತತಿಲಕರಸ, ಮದನಕಾಮದೇವರಸ.

ಕಫರೋಗದಲ್ಲಿ :— ಸರ್ವೇಶ್ವರರಸ, ಸಾರ್ವಭೌಮರಸ, ಮಹಾಲಕ್ಷ್ಮೀ ವಿಲಾಸರಸ.

ಹಿಕ್ಕಾ ಮತ್ತು ಉಬ್ಬಸ :— ಬೃಹತ್‌ಶ್ವಾಸ, ಕಾಸಚಿಂತಾಮಣಿರಸ (ರಸೇಂದ್ರ)

ಉನ್ಮಾದರೋಗದಲ್ಲಿ :— ಚತುರ್ಭುಜರಸ (ರಸೇಂದ್ರ)

ಕ್ಷಯರೋಗದಲ್ಲಿ :— ರಾಜಮೃಗಾಂಕರಸ, ಮೃಗಾಂಕರಸ, ಸ್ವರ್ಣಪರ್ಪಟಿ, ಕನಕಸುಂದರ, ಸರ್ವಾಂಗಸುಂದರ, ಕಾಂಚನಾಭ್ರರಸ, ಮಹಾಮೃಗಾಂಕರಸ, ಸುವರ್ಣಮಾಲಿನಿವಸಂತ, ಸೂತಶೇಖರರಸ.

ಮಧುಮೇಹದಲ್ಲಿ :— ಬೃಹತ್ಸೋಮನಾಥರಸ, ವಸಂತಕುಸುಮಾಕರರಸ.

ಶೂಲರೋಗದಲ್ಲಿ :— ಸರ್ವಾಂಗಸುಂದರ, ತ್ರಿಗುಣಾತ್ಯರಸ, ತ್ರಿನೇತ್ರರಸ.

ಗುಲ್ಮವೃದ್ಧಿರೋಗದಲ್ಲಿ :— ವಿದ್ಯಾಧರರಸ, ಸರ್ವೇಶ್ವರರಸ,

ಗೋನೋರಿಯಾ ಮತ್ತು ಧಾತುಸ್ರಾವ :— ಬೃಹತ್‌ಹರಿಶಂಕರರಸ, ಬೃಹತ್ ವಂಗೇಶ್ವರ, ಮೋಹಕೇಸರಿ.



*ನಿಖಿಲ ಕರ್ನಾಟಕ ಆಯುರ್ವೇದ ಮಂಡಳದ ಪ್ರಧಾನ ಕಾರ್ಯದರ್ಶಿಯವರಾಗಿ ಡಾ॥ ಎಸ್. ಆರ್. ಹಿರೇಮಠ. ವಿಜಾಪುರ ಇವರು ಆರಿಸಲ್ಪಟ್ಟಿರುವರು.

* * * * * *

*ಬಿ. ಸಿ. ಜಿ. ವಿಷನಿವಾರಣೆಗೆ "ಆಯುರ್ವೇದ"ದ ಅಕ್ಟೋಬರ ಮತ್ತು ನವಂಬರ ತಿಂಗಳ ವಿಶೇಷ ಸಂಚಿಕೆಯ ಪುಟ 16 ಮತ್ತು 17 ನ್ನು ಅವಲೋಕಿಸಿರಿ.

## ವಾರ್ತೆಗಳು

ಸಿ. ಕ. ಆ. ಮಂಡಲದ [illegible] 30-12-52 ರಂದು ರಾತ್ರಿ [illegible] ಜಿ. ಬಿ. ಸವಣೂರ ಇವರ ಅಧ್ಯಕ್ಷತೆಯಲ್ಲಿ [illegible] ವನ್ನು [illegible] ಸಮ್ಮೇಳನದಲ್ಲಿ [illegible] ವಿಷಾದದಿಂದ "ಈಗಾಗಲೇ [illegible] ವನ್ನು" (ರಾಜೀನಾಮೆಯ) [illegible] ಮುಕ್ತಾಯಗೊಳಿಸಲ್ಪಟ್ಟಿತು.

● ● ● ●

ತಾ॥ 31-12-1952 ಮತ್ತು 1-1-53 [illegible] ಶಾಸ್ತ್ರಿ, ತಿಗಿವಾಳಮಠ ಇವರ ಅಧ್ಯಕ್ಷತೆಯಲ್ಲಿ [illegible] ಗೂಡಿ 19 ನೇ ಸಿ. ಕ. ಆ. ಮಂಡಲದ ಸಮ್ಮೇಳನವು [illegible] ಪದಿ (ಆ[illegible] ಅಧ್ಯಕ್ಷ [illegible] ಆಯುರ್ವೇದ [illegible] ಅಭಿವೃದ್ಧಿಯ ಯೋಜನೆ, ಆಯುರ್ವೇದೀಯರ [illegible] ವಿಚಾರ, ಇತ್ಯಾದಿ [illegible] ನಡೆಯಿತು. ಡಾ॥ ಎಸ್ [illegible] ದರ್ಶಿಗಳಾಗಿ ಆರಿಸಲ್ಪಟ್ಟಿರುವರು.

● ● ● ●

ಮೈಸೂರು ಆಯುರ್ವೇದ [illegible] ಮಹೋತ್ಸವವು ತಾ॥ 25-1-53 [illegible] ಉದ್ಘಾಟಿಸಲ್ಪಟ್ಟಿತು. (ಇವರ [illegible]) [illegible] ವೇದ ವಿದ್ವಾನ್ ಡಾ॥ [illegible] ಕಾರ್ಯಕ್ರಮಗಳಿಂದೊಡಗೂಡಿ ಎರಡು ದಿವಸಗಳ [illegible] ನೆರವೇರಿತು.

---

# ಕೆಲವು ಚರ್ಮ ರೋಗಗಳ ಚಿಕಿತ್ಸಾ ಫಲಿತಾಂಶ

ಲೇಖಕರು:—ಆಯುರ್ವೇದ ವಿದ್ವಾನ್, ಶ್ರೀ ಎನ್. ಎಲ್. ಭಟ್ಟಾಚಾರ್ಯರು,
ಮೈಸೂರು.

**ವ್ಯಾಧಿ ಸಂಕೇತ** (ಸು|ಸಂ|ನಿ|ಅ. ೫)—

ಚರ್ಮರೋಗಗಳನ್ನು ನಿರೂಪಣೆ ಮಾಡುವಾಗ ಕುಷ್ಠರೋಗನಿದಾನದಲ್ಲಿ—

1. ರಸಿಕೆ, ನವೆ, ಸಣ್ಣ ಸಣ್ಣ ಬೊಕ್ಕೆಗಳುಂಟಾಗಿ ಉರಿಯುಂಟಾಗುವುದಾದರೆ "**ಪಾಮಾ**" ಕರಪಾಣಿ ಎಂದೂ,
2. ಅವೇ ಕಪ್ಪುಬಣ್ಣದ ದಪ್ಪಗುಳ್ಳೆಗಳಾಗಿ ಉರಿಯಿಂದ ಕೂಡಿ ತೊಡೆಗಳು ಕೈಕಾಲುಗಳು, ಪಿಕ್ರೆಗಳು ಇತ್ಯಾದಿ ಭಾಗಗಳಲ್ಲಾದರೆ "ಕಚ್ಛೂಃ" ಎಂದೂ,
3. ರಸಿಕೆಯೊಡನೆ ಬೊಕ್ಕೆಗಳಿದ್ದು ನವೆಯಾಗುತ್ತಿದ್ದರೆ "ರಕಸ"ವೆಂದೂ ತಿಳಿಯಬೇಕು. ಅಂದರೆ ಕುಷ್ಠವ್ಯಾಧಿಯ ಭೇದಗಳಾದ ಈ ರೋಗಗಳಿಗೆ ಸಾಮಾನ್ಯ ಜನರು ವಾಡಿಕೆಯಾಗಿ ಹೇಳುವಂತೆ ಪಾಮಾ ಎಂದರೆ ಇಸಬು (ವಿಸಬು), ಕಚ್ಛೂಃ ಕಜ್ಜಿ (ಆನೆಕಜ್ಜಿ) ರಕಸ ಎಂದರೆ ತುರಿಕಜ್ಜಿಯೂ ಸೀರಾಡದ ಕರಪಾಣಿ ಎಂದೂ ಹೇಳುತ್ತಾರೆ.

ನಂ. ೧. ೧೨-೯-೧೯೫೧ರಲ್ಲಿ ೩೦ ವರ್ಷ ವಯಸ್ಸಿನ ಹೆಂಗಸು, ಎರಡು ಮೊಳಕೈ ತೋಳುಗಳ ಸಂದುಗಳಮೇಲೂ ಮಂಡಿಗಳ ಹಿಂಭಾಗ, ಹೊಟ್ಟೆಯ ಮೇಲೆ ಮುಖದ ಕೆನ್ನೆಗಳಲ್ಲಿ ಅಲ್ಲಲ್ಲೇ ಚರ್ಮವು ಕಪ್ಪಾಗಿ ನುಚ್ಚು ನುಚ್ಚಾದ ಬೊಕ್ಕೆಗಳಿದ್ದು ನವೆಯಾಗುತ್ತಲೂ ರಸಿಕೆಯಾಗುತ್ತಲೂ ವಿಾಸಿನವಾಸನೆಯುಳ್ಳದಾಗಿಯೂ ಹೊಟ್ಟೆಯೊಳಗೆ ಭುಗ್ ಭುಗ್ ಎಂದು ಉರಿಯುಂಟಾಗುವಂತೆಯೂ ನಿದ್ರೆ ಬಾರದೆಯೂ ತೊಂದರೆಪಡುತ್ತಿದ್ದರು. ಅಭ್ಯಂತರಚಿಕಿತ್ಸೆ—ಸೈಂಧವಭಸ್ಮ ೩ ಗುಂಜಗಳು ಟಂಕಣಭಸ್ಮ ೩ ಗುಂಜಗಳು, ಮಿಶ್ರಮಾಡಿ ಒಂದು ತೊಲದಷ್ಟು ತುಪ್ಪದಲ್ಲಿ ತಿನ್ನಿಸಿ ಕೂಡಲೆ ಊಟಮಾಡುವಂತೆಯೂ ಬಿಸಿನೀರನ್ನೇ ಕುಡಿಯುವಂತೆಯೂ ೭ ದಿನಗಳು ಮಾಡಿಸಿ ೩ನೇ ದಿನ ಅಭ್ಯಂಗಸ್ನಾನ ಮಾಡಿಸಿದಮೇಲೆ ಹುರಳಿಕಟ್ಟು ಮೇಲ್ಕಂಡ ಔಷಧವನ್ನೂ ಕುಡಿಸಲಾಯಿತು.

**ಅಪಮೂಟ್ಟಿದ ಸಮೂಹ** ([illegible])

ಒಸೆಯ ದಿನ [illegible] ಮೂರನೇ [illegible] ಅರ್ಧ [illegible] ಗುಂಜ ಸ್ಯೋಫನ ೧ [illegible] ([illegible]) [illegible] ಬಿದ್ದ ಪಡಿಸಿ, ರೋಗಿಗೆ ೧ [illegible], [illegible], [illegible] ಸಲ, ಅರ್ಧ ಘಂಟೆ ಹೊತ್ತಿನಲ್ಲಿ [illegible] ಬಿಟ್ಟಿತು. ಆ ದಿನ [illegible] ದಿನದಿಂದ [illegible] ದಿನಗಳವರೆಗೆ [illegible] ಅಭಯ ಸೂದಕ ಅರ್ಧ [illegible] ಕಷಾಯವನ್ನು [illegible]ಲಾಯಿತು. [illegible] ಸುಸತ್ತಿಗಳು ಅರಳು ಗಂಜಿ ಕುಡಿಸಿ [illegible] ೧–೨ ದಿನಗಳು [illegible] ಚೂರ್ಣ [illegible] ದಿನಕ್ಕೆ ಎರಡು ವೇಳೆಯಂತೆ ತಿನ್ನಿಸಿ [illegible] ಅವರಿಕೆ ಕಲ್ಕ ೧ ಕರ್ಷದಷ್ಟನ್ನು ಹಸಿಯ ಹಾಲಿನಲ್ಲಿ ಕದಡಿ [illegible] ನೆಯದಿನ ಒಂದೇ ಹೊತ್ತು [illegible] ಲಾಯಿತು. ಆ ಮೂರನೆದಿನ [illegible] ಸ್ನಾನಮಾಡಿಸಿ ಸೀಸಾರು ಅನ್ನವನ್ನು [illegible] ಗಳಾದಮೇಲೆ ಎಚ್ಚೆಳ್ಳೆಣ್ಣೆ, ಹರಳೆಣ್ಣೆ [illegible] ಬಿಸಿನೀರಿನಿಂದ ಸ್ನಾನಮಾಡಿಸಿ ಆ ದಿನದಿಂದ [illegible] ಲಾಯಿತು. ಅನಂತರ ಅಶ್ವಗಂಧಾದಿ ಲೇಹ್ಯವನ್ನು, [illegible] ಕೊಡುತ್ತಾ ಬರಲಾಯಿತು.

ಬಹಿರ್ಲೇಪ—ತುಂಬೆ, ತುರುವೆ, ಉಮ್ಮತ್ತಿ [illegible] ತೊಲ ಸೈಂಧವ ೧ ಪಾವು ಹಸುವಿನ [illegible] ಳಿಸಿದ ಮುಲಾಮನ್ನು ಲೇಪಿಸುತ್ತಲೂ [illegible] ನಳ ಕಷಾಯದಿಂದ ತೊಳೆಯುತ್ತಲೂ [illegible] ವೆಲ್ಲಾ ಉದುರಿ ಹೋಗಿ ಚರ್ಮಕ್ಕೆ ಸರಿಯಾದ [illegible] ರೋಮಗಳು ಕ್ರಮವಾಗಿ ಹುಟ್ಟಿ [illegible] ಅದ್ಯಾಪಿ ಸುಖವಾಗಿರುತ್ತಾರೆ.

ನಂ. ೨. ೧೦–೨–೧೯೪೯, ೧ ವರ್ಷದ ಮಗುವಿನ ತಲೆಯ [illegible] ಸರ್ವಾಂಗಗಳಲ್ಲೂ ಬೊಕ್ಕೆ, ರಸಿಕೆ, ದುರ್ವಾಸನೆಗಳಿದ್ದು [illegible] ಗ್ರಂಥಿಗಳುಂಟಾಗಿದ್ದಿತು, ಮೇಲೆ ಮುಲಾಮು ಲೇಪ, [illegible]

ಳಿಂದ 15 ದಿವಸಗಳಲ್ಲೇ ಆರೋಗ್ಯಪ್ರಾಪ್ತಿಯಾಯಿತು ಚರ್ಮದಲ್ಲಿ ಯಾವ ವಿಧದ ಕಲೆಯೂ ಇರುವುದಿಲ್ಲ.

ನಂ. ೩. ೧೮-೯-೧೯೫೦, ಸುಮಾರು ೫೦ ವರ್ಷದ ಗಂಡಸರೊಬ್ಬರಿಗೆ ರಕ ಸವಿದ್ದಿತು. ನಂ. ೧ ಕ್ರಮದಂತೆ ಚಿಕಿತ್ಸೆಮಾಡಿದ್ದಕ್ಕೆ ಚರ್ಮವು ಸ್ವಾಭಾವಿಕ ಬಣ್ಣಕ್ಕೆ ತಿರುಗುತ್ತದೆ. ರೋಮಗಳು ಹುಟ್ಟಿವೆ, ಆದರೆ ಶೀತಕಾಲದಲ್ಲಿ ಚರ್ಮವು ಸ್ವಲ್ಪ ಬಿರಿಯುತ್ತದೆ. ವಯಸ್ಸಾದ ಕಾರಣ ವ್ಯಾಧಿ ರೂಢಮೂಲಕವಾಗಿರಬೇಕು ಉದಾಶೀನತೆಯನ್ನು ಬಿಟ್ಟು ಮತ್ತೊಂದುಸಾರಿ ಚಿಕಿತ್ಸೆ ಪಡೆದರೆ ಪೂರ್ಣ ಗುಣವಾದೀತೆಂದು ಭರವಸೆ.

---

## ಮೈಸೂರಿನಲ್ಲಿ ಬಿ. ಸಿ. ಜಿ. ಪ್ರಚಾರಕರ ಧೂರ್ತತನ

ಇಲ್ಲಿಯ ಬಿ. ಸಿ. ಜಿ. ಪ್ರಚಾರದ ಕುರಿತು ನಮ್ಮ ಸಹಸಂಪಾದಕರಾದ ಆ. ವಿ. ಡಾ॥ ಸುಬ್ರಹ್ಮಣ್ಯಶಾಸ್ತ್ರಿ L M.P. ಇವರಿಗೂ ಪ್ರಚಾರಕರಿಗೂ ಇಲ್ಲಿಯ ಪೌರಸಭಾಭವನದಲ್ಲಿ ನಡೆದ ಪ್ರಶ್ನೋತ್ತರಗಳನ್ನು "ಆಯುರ್ವೇದ"ದ ಕಳೆದ (ಜನವರಿ) ಸಂಚಿಕೆಯಲ್ಲಿ ಪ್ರಕಟಿಸಿರುತ್ತೇವಷ್ಟೆ. ಆದರೂ ಈ ಪ್ರಚಾರಕರೂ ತಮ್ಮ ಹುದ್ದೆಗಾರಿಕೆಗಾಗಿಯೋ ಅಥವಾ ಮೇಲಧಿಕಾರಿಗಳ ಒತ್ತಡದಿಂದಲೋ ಅಂತು ತಮ್ಮ ಕರ್ತವ್ಯಪಾಲನೆಗಾಗಿ ಅನ್ನಿ, ಕೇರಿ, ಕೇರಿಗಳಲ್ಲಿ, ಶಾಲೆಗಳಲ್ಲಿ, ಬೀದಿಗಳಲ್ಲಿ ತಮ್ಮೊಡನಿರುವ ಅಂ. ರಾ. ಆ. ಶಾಖೆಯ ಮೋಟಾರುವ್ಯಾನಿಗೆ ಧ್ವನಿವಾಹಕಯಂತ್ರ ಹಚ್ಚಿ "ಬನ್ನಿರಿ! ಬನ್ನಿರಿ!! ಕ್ಷಯರೋಗದಿಂದ ಮುಕ್ತರಾಗಿರಿ!!! ದೇಶದ ಅಭ್ಯುದಯ (ಪರದೇಶದ ಔಷಧಗಳನ್ನವಲಂಬಿಸಿ, ಅದೂ ಅಲ್ಲಿ ನಿಷ್ಪ್ರಯೋಜಕವೆಂದಾದದ್ದಕ್ಕೆ) ನೆರವಾಗಿರಿ...... ......ಇತ್ಯಾದಿ ಆಕರ್ಷಣೀಯ ರೀತಿಗಳಿಂದ ಕೂಗಿ ಕಾರ್ಯಪ್ರವೃತ್ತರಾಗಿ ತಾ॥ 22-1-53 ರಲ್ಲಿ ಇಲ್ಲಿಯ ಹಳೇಅಗ್ರಹಾರದ ತ್ಯಾಗರಾಜಬೀದಿಯಲ್ಲಿ ನಮ್ಮ ಸಹಸಂಪಾದಕರಾದ ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳವರ ಅಂಗಡಿಯ ಎದುರಲ್ಲಿ ಠಾಣ್ಯ ಹೊಡೆದು ಪ್ರಚಾರ ಮಾಡಿ ಪಾಪದ ಜನತೆಯನ್ನು ಕೂಗಿ ಕರೆದು ಕೆಲವರ ಮೇಲೆ ಬಿ. ಸಿ. ಜಿ. ಚುಚ್ಚುಪ್ರಯೋಗವನ್ನು ಮಾಡಿದರು. ಇದನ್ನು ನೋಡಿ ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳವರು ಕಸಿಕರಪಟ್ಟು "ಆಯುರ್ವೇದ"ದಲ್ಲಿ ಈ ಮೊದಲು ಪ್ರಕಟಿಸಿದ ಲೇಖನಗಳ ಪ್ರತಿ, ಹಾಗೂ ತಾವು ಇತರ ಪತ್ರಿಕೆಗಳಲ್ಲಿ ಪ್ರಕಟಿಸಿದ ಈ ಕುರಿತಾದ ಲೇಖನಗಳ ಪ್ರತಿಗಳನ್ನೂ ಈ ಕೆಳಗೆ ಕಾಣಿಸಿದ ಆಗತಾನೇ ಕೈಯಿಂದಲೇ ಬರೆದ ಒಂದು ಪ್ರಕಟಣೆಯನ್ನೂ ಸಾರ್ವಜನಿಕರ ಅವಗಾಹನೆಗಾಗಿ ತಮ್ಮ ಅಂಗಡಿಯ ಪಕ್ಕದಲ್ಲಿಯೂ, ಆಸುಪಾಸುಗಳಲ್ಲಿಯೂ ಅಂಟಿಸಿದರು. ಇದು

ಜನರಿಗೆ ಅವರ ಸೇವೆಯ ಮೇಲೆ ಅಭಿಮಾನವಿರುವುದರಿಂದ ಅದನ್ನು ಬಳಸಿಕೊಂಡು ಈ [illegible] [illegible]. ಹಾಗೂ ಪ್ರಚಾರಕ್ಕೆ [illegible] ಯಾಗಿ ಕಡೆಗೆ ಯಾರೋ ಒಬ್ಬರು ಆ ಪ್ರಚಾರಕ್ಕೆ [illegible] ಶ್ರೀ ಶಾಸ್ತ್ರಿ ಪ್ರಚಾರದಿಂದ ಜನರನ್ನು [illegible] ಗಳವರು ಅಂಟಿಸಿದ, ಹಾಗೂ ಜನ [illegible] ಗಳ ಕಡೆಗೆ ಅವರ ಲಕ್ಷ್ಯ ಎಳೆದರಂತೆ. (ಆಗ ಶ್ರೀ ಶಾಸ್ತ್ರಿ [illegible] ದ್ದರು.) ಈ ಪ್ರಚಾರಕರು ಅದನ್ನು ನೋಡಿ '[illegible]......' [illegible] ಅವಾಚ್ಯಗಳನ್ನಾಡಿ, ಅಲ್ಲಿ ಅಂಟಿಸಿದ್ದ ಪ್ರಕಟಣೆಗಳನ್ನು ಹರಿದು ಹಾಕಿದ ರಂತೆ. ಹಾಗೂ ಪಕ್ಕದಲ್ಲಿದ್ದ ಡಾ॥ [illegible] ಶ್ರೀ ಶಾಸ್ತ್ರಿಗಳ ವಿಚಾರ ಕಂಡಾಬಟ್ಟೆ ಆಡಿ [illegible] "ಅವರ [illegible] ಈ ಕುರಿತು ನೀವುಗಳು ಅವರಿಂದ [illegible] ಕೇಳಿಕೊಳ್ಳಬೇಕು. [illegible] ಅವರನ್ನು ಜರಿಯಬೇಡಿ ಎಂದು ಬುದ್ಧಿ ಹೇಳಿಕೊಂಡರು. [illegible]

ಆ ಬಳಿಕ ಡಾ॥ ಶಾಸ್ತ್ರಿಗಳವರು ಪುನಃ ಅಂಗಡಿಗೆ [illegible] ಅಂಟಿಸಿದ ಪ್ರಕಟಣೆಗಳನ್ನೆಲ್ಲವೂ ಕಿತ್ತಿದ್ದನ್ನು ಕಂಡು, ಪುನಃ [illegible]. ಇದನ್ನು ಕಂಡು ಈ ಪ್ರಚಾರಕರು "ನಿಮಗೆ ಬಿ. ಸಿ. ಜಿ. ವಿಚಾರ ಏನು ಗೊತ್ತು? ನೀವು ಈ ರೀತಿ ಸುಳ್ಳು ಪ್ರಚಾರ ಏಕೆ ಮಾಡುವುದು? ಈ [illegible] ಯಾಕೆ ನಿಗಾ ತೆಗೆದುಕೊಳ್ಳಕೂಡದು? ಇತ್ಯಾದಿ [illegible] ಆಡಿದ ಬಳಿಕ ಡಾ॥ ಶಾಸ್ತ್ರಿಗಳವರು ಬಿ. ಸಿ. ಜಿ. [illegible] ತಮ್ಮೊಡನಿದ್ದ ಆಧಾರ ಸಹಿತ ವಾರ್ತಾಪತ್ರ ದಾಖಲೆಗಳನ್ನು ತೋರಿಸಿ [illegible] ಇದ್ದುದರಲ್ಲಿ ಕೆಲವನ್ನು "ತಾವೂ ಕೂಡ ಸರಿಯಾಗಿ ಓದಿ ತಿಳಿದು ಮತ್ತೆ ಸುಳ್ಳು ಪ್ರಚಾರಕರು ಯಾರೆಂಬುದನ್ನು ಮನಗಾಣಿರಿ" ಎಂದು ಸಮಾಧಾನ ಹೇಳಿಕಳುಹಿಸಿ ದರಂತೆ.

ಅಂದು ನಡೆದದ್ದು ಪರೀಕ್ಷಾರ್ಥದ ಪ್ರಥಮ ಚುಚ್ಚು ಮಾತ್ರ, ಇನ್ನು ಬಿ.ಸಿ.ಜಿ ಚುಚ್ಚಿಗೆ ಸೋಮವಾರ ಇದೇ ಸ್ಥಳಕ್ಕೆ ಬರಬೇಕೆಂದು ಪರೀಕ್ಷೆ ಚುಚ್ಚಿಸಿಕೊಂಡವರಿಗೆ ಹೇಳಿದ್ದರಂತೆ ಈ ಪ್ರಚಾರಕರು. ಆದರೆ ಆ ಸೋಮವಾರ ಬಿಟ್ಟು ಆ ಬಳಿಕದ ಸೋಮವಾರವಾದರೂ ಈ ಪ್ರಚಾರಕರು ಆ ವಠಾರಕ್ಕೇ ಬಂದಿಲ್ಲವೆಂಬುದು ಸೋಜಿಗ.

ಆಯುರ್ವೇದ ವಿದ್ವಾನ್ ಡಾ॥ ಸುಬ್ರಹ್ಮಣ್ಯಶಾಸ್ತ್ರಿ L.M.P. ಇವರು ಹಸ್ತ ಲಿಖಿತವಾಗಿ ಬರೆದು ಅಂಟಿಸಿದ ಪ್ರಕಟಣೆ ಈ ರೀತಿಯಲ್ಲಿತ್ತು


# ಎಚ್ಚರಿಕೆ

ಭಾರತದಲ್ಲಿ ದಿನೇದಿನೇ ಜನಸಂಖ್ಯೆ ಹೆಚ್ಚುತ್ತಿದೆ. ಅನ್ನ ವಸತಿಗಳನ್ನು ಒದಗಿಸುವುದು ಕಷ್ಟ. ಇದಕ್ಕೆ ಬಿ. ಸಿ. ಜಿ. ವ್ಯಾಕ್ಸೀನ್ ಒಳ್ಳೇ ಮದ್ದು. ಇದು ಒಂದು "ಹಾರಿ ಒಳಸಂಚಿನಂತಿದೆ." ಬಿ ಸಿ. ಜಿ ಯವರೇ ತೋರಿಸುವ ಚಲ ಚಿತ್ರದಲ್ಲಿ ಹಾದಿಯಲ್ಲಿ ಬಿದ್ದ ರಸದಿಂದ ಅಥವಾ ರೋಗಿಯು ಹತ್ತಿರ ಇರುವಾಗ ಅವನಿಂದ ಹೊರಬರುವ ಒಂದೆರಡು ಕ್ರಿಮಿಗಳು ಗಾಳಿ ಮುಖಾಂತರ ಶ್ವಾಸಕೋಶ ಸೇರಿದರೇನೇ ಕ್ಷಯರೋಗ ಬರುತ್ತದೆಂದು ತೋರಿಸುತ್ತಾರೆ. ಹಾಗಿರುವಾಗ ನಮ್ಮ ದೇಹಕ್ಕೆ ಮತ್ತು ರಕ್ತಕ್ಕೆ ಜೀವಂತ ಹೊಸಜಾತಿ ಅನೇಕ ಕ್ಷಯಕ್ರಿಮಿ ಸೇರಿದರೆ ಇದು ಕ್ಷಯ ಉಂಟುಮಾಡುವುದಿಲ್ಲವೆಂದು ಸುಳ್ಳು ಪ್ರಚಾರ ಮಾಡುತ್ತಿದ್ದಾರೆ.

**ಬಿ. ಸಿ. ಜಿ. ವ್ಯಾಕ್ಸಿನೇಷನ್ನಿನಿಂದ ಉಗ್ರ ಕ್ಷಯರೋಗ ಹರಡುತ್ತೆ.** ಇದಕ್ಕೆ ನಿಮ್ಮ ಸರ್ವಸ್ವವನ್ನೂ ಡಾಕ್ಟರುಗಳಿಗೆ ತೆತ್ತರೂ ವಾಸಿಯಾಗುವುದಿಲ್ಲ ಎಂದು ಲಂಡನ್, ಅಮೇರಿಕಾಗಳ ಪ್ರವೀಣ ಡಾಕ್ಟರರುಗಳೂ, ನಮ್ಮದೇ ಆದ ಕಲ್ಕತ್ತಾ ಮೆಡಿಕಲ್ ಕಾಲೇಜಿನ ಪ್ರವೀಣ ಡಾ|| ಪಿ. ಕೆ. ಸೇನ್‌ರೂ ಮುಂತಾದವರೂ ಪ್ರಸಿದ್ಧಪಡಿಸಿದ್ದಾರೆ. ಆದ್ದರಿಂದ ನಮ್ಮ ಮತ್ತು ನಿಮ್ಮ ಮಕ್ಕಳನ್ನು ಈ ಅಕೃತ್ಯದಿಂದ ರಕ್ಷಿಸಲು ಎಚ್ಚರಿಕೆಯುಂದಿರಿ. ಇದು ಕ್ಷಯನಿವಾರಣೆಯೋ ? ಜನ ನಿವಾರಣೆಯೋ ? ನೀವೇ ವಿಮರ್ಶಿಸಿರಿ.

(ಸಹಿ) ಎಸ್. ಎಸ್. ಶಾಸ್ತ್ರಿ.






ಆಯುರ್ವೇದ ವಿದ್ವಾನ್

ಡಾ॥ ಅಗರಂ ವೆಂಕಟರಾಮು ಪಂಡಿತರು

---

## ಮೈಸೂರ ಸಂಸ್ಥಾನದ ಆಯುರ್ವೇದ ವೈದ್ಯರ ಚತುರ್ಥ ಸಮ್ಮೇಲನದ ಅಧ್ಯಕ್ಷ ಭಾಷಣದ ಸಾರಾಂಶ

"ನಾವು ಜನರ ನಡುವೆ, ಆಯುರ್ವೇದದ ಕಿರಣವನ್ನು ಬೆಳಗೋಣ ; ಇತರರಿಗೆ ಕಲಿಸೋಣ. ಇತರರಿಂದ ನಾವು ಕಲಿಯಬೇಕಾದುದನ್ನು ಕಲಿತು ಸಮೃದ್ಧವನ್ನಾಗಿ

ಮಾಡಿಕೊಂಡು ಬಳಕೆಗೆ ತರೋಣ, ಬೆಳೆಯೋಣ, ಬಾಳೋಣ. ಇತರ ಶಾಸ್ತ್ರಗಳ ಸಂಗಡಲೇ ಏಳಿಗೆಯಾಗುವ. ಜತೆಯಲ್ಲಿಯೇ ಜಗತ್ತಿನ ಉದ್ಧಾರಕ್ಕಾಗಿ ದುಡಿಯೋಣ. ನಮಗೆ ನಮ್ಮ ವೈಶಿಷ್ಟ್ಯವನ್ನು ಕಾಪಾಡಿಕೊಳ್ಳುವುದರ ಕಡೆಗೆ ಮಾತ್ರ ಗಮನವಿರಬೇಕಲ್ಲದೆ ಯಾವ ಪದ್ಧತಿಯ ಮೇಲೂ ದ್ವೇಷವಿಲ್ಲದಿರಲಿ" ಎಂಬುದಾಗಿ ಮೈಸೂರು ಆಯುರ್ವೇದ ವೈದ್ಯಸಂಘದ ರಜತಮಹೋತ್ಸವ ಮತ್ತು ಸಂಸ್ಥಾನದ ಆಯುರ್ವೇದ ವೈದ್ಯರ ನಾಲ್ಕನೆಯ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಆಯುರ್ವೇದ ವಿದ್ವಾನ್ ಡಾ|| ಅಗರಂ ವೆಂಕಟರಾಮಪಂಡಿತರು ಹೇಳಿದರು.

ಪಂಡಿತರು, ಭಾರತದಲ್ಲೆಲ್ಲಾ ಪ್ರಸಿದ್ಧಿಪಡೆದ ಮದರಾಸಿನ ವೈದ್ಯರತ್ನ ಪಂಡಿತ ಡಿ ಗೋಪಾಲಾಚಾರ್ಲುರವರ ಗುರುಗಳಾದ ಅಗರಂ ಪುಟ್ಟಸ್ವಾಮಿಪಂಡಿತರ ಮಕ್ಕಳು ಮನೆತನವೇ ಆಯುರ್ವೇದ ಪಂಡಿತ ಪರಂಪರೆ ವೆಂಕಟರಾಮ ಪಂಡಿತರಾದರೂ ಪಾಶ್ಚಾತ್ಯ ಪೌರಸ್ತ್ಯ ಉಭಯಶಾಸ್ತ್ರಗಳಲ್ಲಿಯೂ ಪ್ರವೀಣರು. ಮಂದಮತಿಗಳು ಅಗ್ನಿಸಾಕ್ಷಿಯಾಗಿ ಮದುವೆಯಾದ ಧರ್ಮಪತ್ನಿಯಿದ್ದರೂ ಗುಡಶೆಟ್ಟಿಗೆ ಮೋಹಿಸುವಂತೆ, ಆಯುರ್ವೇದಾಭ್ಯಾಸವನ್ನು ಮಾಡಿದ ಆಧುನಿಕ ವೈದ್ಯರು ತಮಗೆ ಪಾಶ್ಚಾತ್ಯ ವೈದ್ಯದ ಹೆಚ್ಚಿನ ತರಜೇತಿ ಇಲ್ಲದಿದ್ದರೂ, ಎಲೋಪೆತಿಯನ್ನಾಶ್ರಯಿಸುತ್ತಿರುವ ಕಾಲವಿದು. ಪಂಡಿತರು ಉಭಯಶಾಸ್ತ್ರಗಳನ್ನೂ ಅಧ್ಯಯನ ಮಾಡಿದರೂ ಆಯುರ್ವೇದ ತತ್ವಗಳೇ ಸರ್ವಶ್ರೇಷ್ಠವೆಂದು ಮನಗಂಡು ಆಚರಣೆಗೆ ತಂದ ಕರ್ಮವೀರರು. ಇವರು ಭುವನಗಿರಿಯಲ್ಲಿ ಆಯುರ್ವೇದ ಆಸ್ಪತ್ರೆಗೆ ಡಾಕ್ಟರಾಗಿದ್ದಾಗ, ಆಯುರ್ವೇದ ಆಸ್ಪತ್ರೆಯೇ ಅನವಶ್ಯಕವೆಂದು ಅಲ್ಲಿಯ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರರು ಚಳುವಳಿ ನಡೆಸುತ್ತಿದ್ದರೂ ಪಂಡಿತರ ಆಯುರ್ವೇದಾಭಿಮಾನ ಮತ್ತು ಚಿಕಿತ್ಸಾ ಕೌಶಲ್ಯದ ಪರಿಣಾಮವಾಗಿ ಆ ಜಿಲ್ಲೆಯಲ್ಲಿ ಆಯುರ್ವೇದ ಆಸ್ಪತ್ರೆಗಳು ಆರಕ್ಕೆಹೆಚ್ಚಿದವು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ,

"ನಾವು ನಾಗರಿಕತೆಯ ಸುಳಿಗೆ ಸಿಕ್ಕಿ ತೊಳಲುತ್ತಿರುವೆವು. ಆಧುನಿಕ ವಿಜ್ಞಾನಿಗಳು ತಮ್ಮ ಪರಿಶೋಧನೆಗಳಿಂದ ಜಗತ್ತನ್ನೇ ಒಂದುಗೂಡಿಸುತ್ತಿದ್ದಾರೆ. ನಮ್ಮ ಆಹಾರವಿಹಾರಗಳೂ, ಜೀವನವೂ, ಆಕಾಂಕ್ಷೆಗಳೂ ಮಿಂಚಿನ ವೇಗದಿಂದ ಮಾರ್ಪಡುತ್ತಿವೆ. ಹೊಸಹೊಸ ರೋಗಗಳು ಅಸಂಖ್ಯಾತವಾಗಿ ಹುಟ್ಟುತ್ತಿವೆ. ನಮ್ಮ ಹಳೆಯ ಶಾಸ್ತ್ರದ ತತ್ವಗಳು ಈಗಿನ ಕಾಲಕ್ಕೆ ಸರಿಹೋಗುವುದಿಲ್ಲ ಎಂಬ ಅರ್ಥವಿಲ್ಲದ ವಾದವು ಒಂದು ಕಡೆ. ಸರ್ಕಾರವು ನಮ್ಮ ವೈದ್ಯರಿಗೂ ಪಾಶ್ಚಾತ್ಯ ವೈದ್ಯರಿಗೂ ತೋರಿಸುತ್ತಿರುವ ಭೇದಭಾವನೆ ಮತ್ತೊಂದು ಕಡೆ; ಹೀಗೆ ನಮ್ಮ ಸೇವಾಸಂಕಲ್ಪಕ್ಕೆ ಹಲವು ಆತಂಕಗಳಿವೆ.

ದೇಹವು ಎಷ್ಟಿಷವರಿಗೆ [illegible] ಟ್ಟಿರುವುದೋ ಅಷ್ಟಿನವರಿಗೂ ಎಷ್ಟು [illegible], [illegible] ತ್ರಿದೋಷಸಿದ್ಧಾಂತವು ಬದಲಾಗುವುದಿಲ್ಲ.

ಪಿತ್ಥ [illegible] ಗಳನ್ನು ನಾವು ಪರೀಕ್ಷಿಸಲ್ಲ, [illegible] ನೀವು ಬಲ್ಲಿರಿ. ಇನ್ನು ಆಧುನಿಕರು ಪರೀಕ್ಷಿಸಲು [illegible] ಎಲ್ಲ ರೋಗಗಳೂ ಮನುಷ್ಯ [illegible] ಹೊಂದದೆ ಇದೇ ಸ್ಥಿತಿಯಲ್ಲಿರುವವರಿಗೂ ಅದರ [illegible] ಚಿಕಿತ್ಸಾಕ್ರಮವೂ ಸ್ಥಿರವಾದುದು.

ಒಬ್ಬ ಮನುಷ್ಯನೇ [illegible] ತನ್ನ [illegible] ತನ್ನ ನಿಜರೂಪವು ತಿಳಿಯದಂತೆ [illegible] ಪಿತ್ತ, ಶ್ಲೇಷ್ಮಗಳೆಂಬ ಮೂರು ದೋಷಗಳು ತಮ್ಮ ತಮ್ಮ [illegible] ಪಿಢಗಳಲ್ಲಿ ಬದಲಾಯಿಸಿ, ಹೊಸ ರೋಗಗಳಿಗೆ [illegible] ನಾವು ಭಯಪಡಕೂಡದು." ಎಂದು [illegible] ತ್ರಿದೋಷಸಿದ್ಧಾಂತವು ಸರ್ವಶ್ರೇಷ್ಠವಾದದ್ದು [illegible] ಒತ್ತಿ ಹೇಳಿದ್ದಾರೆ. [illegible]

"ಮನುಷ್ಯರಿಗೆ ಪಾಂಚಭೌತಿಕವಾದ [illegible] ಉತ್ಪನ್ನವಾಗುವಂತೆ, ಸೂಕ್ಷ್ಮಜೀವಗಳ [illegible] ವ್ಯತ್ಯಾಸಗಳಿಂದಲೂ ಇತರ ದೇಹಗಳಲ್ಲಿ ರೋಗಗಳು [illegible]. ಅಂತಹ ಸಮಯದಲ್ಲಿ ವೈದ್ಯನು ವ್ಯಾಧಿಗೆ ನಿಜವಾದ ಕಾರಣ [illegible] ತಿಳಿದು, ಯಾವ ದೇಹದ ವ್ಯತ್ಯಾಸದಿಂದ ರೋಗವು ಉತ್ಪನ್ನವಾಗಿರುವುದೋ ಆ ದೇಹಕ್ಕೆ ತಕ್ಕ ಚಿಕಿತ್ಸೆಯನ್ನು ನಡೆಸಬೇಕು ಎಂದು ಹೇಳುವರು. [illegible] ರೀತಿಯಾಗಿ, ಅವರು ಇದನ್ನು ಗಮನಿಸದೆ, [illegible] ನಿಜವಾದ ಕಾರಣ [illegible] ವನ್ನು ತಿಳಿದುಕೊಳ್ಳದೆ, ಎಲ್ಲ ಚಿಕಿತ್ಸೆಯನ್ನು [illegible]. ಆದುದರಿಂದಲೇ ಆ ವ್ಯಾಧಿಯು ಪೂರ್ಣವಾಗಿ [illegible]. [illegible] ಪ್ರತ್ಯಕ್ಷವಾಗಿ ಕಾಣುವ ವಿಷಯ [illegible] ಸೂಕ್ಷ್ಮಭೇದಗಳನ್ನು ಕಂಡುಹಿಡಿದಿದ್ದರೂ [illegible] ಮಾರ್ಗದಲ್ಲಿ ಅದನ್ನು ಅನುಸರಿಸುತ್ತಿಲ್ಲ. ಇದು ಒಂದು [illegible] ಹೇಳಬಹುದು; ಇದಿರಲಿ. ಆಧುನಿಕರು [illegible] ಹಿಡಿದು, ಅದನ್ನೂ ಅಸ್ತವ್ಯಸ್ತವಾಗಿ ನಿಶ್ಚಯಾತ್ಮಕವಲ್ಲದೆ ನಿರೂಪಿಸುತ್ತಿರುವ ಅನೇಕ

ಅಂಶಗಳನ್ನು ನಮ್ಮ ಆರ್ಯಮಹರ್ಷಿಗಳು ಸಾವಿರಾರು ವರ್ಷಗಳ ಹಿಂದೆಯೇ ಇದಕ್ಕಿಂತಲೂ ಅತಿಶಯವಾದ ಮತ್ತು ಸಿದ್ಧಾಸ್ವರೂಪವಾದ ಅನೇಕ ವಿಷಯಗಳನ್ನು ತಪಶ್ಶಕ್ತಿಯಿಂದಲೂ, ಸೂಕ್ಷ್ಮಜ್ಞಾನದಿಂದಲೂ ಕಂಡುಹಿಡಿದು ನಮಗೆ ಮಹೋಪಕಾರವೆಸಗಿರುವರು. ನಾವು ಇದನ್ನು ಅರಿಯಲು ಅಸಮರ್ಥರಾಗಿ ಪರದೇಶದ ಪರಕೀಯರು ಅಸಮಂಜಸವಾಗಿ, ಅಸಮಗ್ರವಾಗಿ ಹೇಳುತ್ತಿರುವ ವಿಮರ್ಶೆಯನ್ನೇ ಸಿದ್ಧಾಂತರೂಪವೆಂದು ತಿಳಿದು ಭ್ರಾಂತರಾಗಿ ಅವರ ತತ್ವಕ್ಕೆ ಬಲಿಯಾಗುತ್ತಿರುವೆವು. ಇದನ್ನು ಪೂರ್ಣವಾದ ಆತ್ಮದ್ರೋಹವೆನ್ನಬಹುದು"

ಎಂದು ಹೇಳಿ ಆಯುರ್ವೇದದ ವೈಶಿಷ್ಟ್ಯವನ್ನು, ಪಾಶ್ಚಾತ್ಯ ಆಧುನಿಕ ವಿಜ್ಞಾನಿಗಳು ನಡೆಸಿದ ಪ್ರಯೋಗಗಳ ವಿಮರ್ಶಾಸಹಿತವಾಗಿ ಹೃದಯಂಗಮವಾಗುವಂತೆ ವಿವರಿಸಿರುತ್ತಾರೆ. ಪಾಶ್ಚಾತ್ಯರು ಆಯುರ್ವೇದಾಭ್ಯಾಸವನ್ನು ಮಾಡಲು ಯತ್ನಿಸಿದ ರೀತಿಯನ್ನು ಪಂಡಿತರು

"ಇತ್ತೀಚೆಗೆ ಆರ್ಯಸಂಸ್ಕೃತಿಯ ಇತರ ಶಾಸ್ತ್ರಗಳ, (ವೇದಾಂತ, ಜ್ಯೋತಿಷ, ಸಾಂಖ್ಯ, ವೈಶೇಷಿಕ) ಪರಿಚಯವನ್ನು ಹೊಂದದೇ ಇರುವ ಜನರಿಗೆ ಈ ಆಯುರ್ವೇದ ಪ್ರಕ್ರಿಯೆಯು ಅರ್ಥವಾಗುವುದಿಲ್ಲವೆಂಬ ಅಂಶವನ್ನು ಅರಿತು, ಪಾಶ್ಚಾತ್ಯದೇಶದ ಹಲವು ವಿಜ್ಞಾನಿಗಳು ಆರ್ಯಸಂಸ್ಕೃತಿಯ ಇತರ ಶಾಸ್ತ್ರಗಳನ್ನು ಮೊದಲೇ ಅಭ್ಯಾಸ ಮಾಡಿ, ಆಮೇಲೆ ಆಯುರ್ವೇದಶಾಸ್ತ್ರದ ಮರ್ಮವನ್ನು ಅರಿ-

[illegible]

[illegible] ರೋಗಗಳನ್ನು ಪ್ರಸ್ತುತ, Brain Tonic ಗಳನ್ನು [illegible] ಯಾವ ಸಂಬಂಧವೂ ಇಲ್ಲವೆಂದು ಸ್ಪಷ್ಟ ಪಡಿಸಿದ್ದಾರೆ. ಮಂತ್ರ, ಜಪ, ದೇವತಾ ರಾಧನೆ ಇತ್ಯಾದಿಗಳೇ [illegible] ಸಾಧನವೆಂದು ಹೇಳ. [illegible] ಅಧ್ಯಕ್ಷರು ಆಯು ರ್ವೇದದ ಗುಣಕಥನವನ್ನು ಮಾಡುವಾಗ ಇತರ ಪದ್ಧತಿಗಳನ್ನು ತೆಗಳಲಿಲ್ಲ. ಆಯು ರ್ವೇದದ ಮುಖ್ಯತತ್ವಗಳಿಗೆ ಹೊಂದಿ ಕೊಂಡು ಇತರ ಚಿಕಿತ್ಸಾಕ್ರಮಗಳನ್ನು ಬಳಸಿಕೊಳ್ಳಬಹುದೆಂಬುದು ಅವರ ಅಭಿ ಪ್ರಾಯ. ಆಯುರ್ವೇದದ ವೈಶಿಷ್ಟ್ಯವನ್ನು ಸೂಕ್ಷ್ಮವಾಗಿಯಾದರೂ ವಿಮರ್ಶಾತ್ಮ ಕವಾಗಿ ವಿಶದವಾಗಿ ತಿಳಿಸುತ್ತಾರೆ. ಸಮ್ಮೇಳನಗಳಲ್ಲಿ ಇಷ್ಟೊಂದು ವಿಚಾರ ಪೂರಿತವಾದ ಭಾಷಣವನ್ನು ಮಾಡಿದ ಅಧ್ಯಕ್ಷರು ವಿರಳ. ಸಮ್ಮೇಳನದ ಯಶಸ್ಸಿ ಗೆ ಅಧ್ಯಕ್ಷರ ವ್ಯಕ್ತಿತ್ವವೂ ಒಂದು ಮುಖ್ಯಸಾಧನವು.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರಾದ, ಶ್ರೀಮಜ್ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ., ಮಹಾಸ್ವಾಮಿಯವರು ಮೈಸೂರು ನಗರದಲ್ಲಿ ಆಯುರ್ವೇದ ವೈದ್ಯಸಂಘದ ರಜತಮಹೋತ್ಸವ, ಮೈಸೂರು ಸಂಸ್ಥಾನದ ಆಯುರ್ವೇದ ವಸ್ತು ಪ್ರದರ್ಶನ ಸಮಾರಂಭಗಳ ಉದ್ಘಾಟನವನ್ನು ನೆರವೇರಿಸಿದಾಗ್ಗೆ ಭಾಷಣ.

**(1953ನೇ ಇಸವಿ ಜನವರಿ 25ನೇ ತಾರೀಖು, ಭಾನುವಾರ)**

ರಾಜಸೇವಾಪ್ರಸಕ್ತ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರವರೇ, ಮಹಿಳೆಯರೇ ಮತ್ತು ಮಹಾಶಯರೇ—

ಈ ದಿನ ನಡೆಯತಕ್ಕ ಸಮಾರಂಭಗಳ ಉದ್ಘಾಟನ ಮಹೋತ್ಸವನ್ನು ನೆರವೇರಿಸುವುದಕ್ಕಾಗಿ, ನಾವು ಅತ್ಯಂತ ಸಂತೋಷದಿಂದ ಇಲ್ಲಿಗೆ ಬಂದಿದ್ದೇವೆ. ಆಯುರ್ವೇದ ವೈದ್ಯಸಂಘದ ಸದಸ್ಯರುಗಳಿಂದ ಸಮರ್ಪಿತವಾದ ವಿಜ್ಞಾಪನಾಪತ್ರಿಕೆಯಲ್ಲೂ, ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರವರ ಭಾಷಣದಲ್ಲೂ, ನಮ್ಮ ವಿಷಯವಾಗಿ ಅನೇಕ ಸವಿನುಡಿಗಳು ಸೂಚಿತವಾಗಿವೆ. ಇದಕ್ಕಾಗಿ, ನಾವು ಅವರನ್ನು ವಂದಿಸುತ್ತೇವೆ.

ನಮ್ಮ ದೇಶದ ವೈದ್ಯವಿದ್ಯೆಯು ಬಹಳ ಪ್ರಾಚೀನ ಕಾಲದ ಶ್ರೇಷ್ಠವಿದ್ಯೆ. ಆಯುರ್ವೇದವೆಂಬ ಹೆಸರೇ ಅದನ್ನು ಸಮರ್ಥಿಸುತ್ತದೆ. ಪ್ರಾಚೀನ ಕಾಲದ ಪ್ರಾಜ್ಞರು ಆಧ್ಯಾತ್ಮಿಕ ವಿದ್ಯೆಯನ್ನು ಪರಾವಿದ್ಯೆಯೆಂದು ಕರೆದರು. ಅದರೂ, ಅವರು ಇತರ ವಿದ್ಯೆಗಳನ್ನು ನಿಕೃಷ್ಟವೆಂದೇನೂ ಭಾವಿಸಿರಲಿಲ್ಲ. ವೈದ್ಯ ವಿದ್ಯೆಯು ಶ್ರೇಷ್ಠವಿದ್ಯೆಯೆಂದೂ, ವೈದ್ಯವೃತ್ತಿಯು ಉತ್ತಮವೃತ್ತಿಯೆಂದೂ ಅವರು ಪರಿಗಣಿಸಿದ್ದರು. ಧನ್ವಂತರಿಯು ಭಗವಂತನ ಅವತಾರವೆಂದೂ, ಅಶ್ವಿನೀ ದೇವತೆಗಳು ವೈದ್ಯಶ್ರೇಷ್ಠರೆಂದೂ, ವರ್ಣಿತವಾಗಿರುವುದೂ ಇದಕ್ಕೆ ನಿದರ್ಶನ. ಪರಮೇಶ್ವರನಿಗೆ "ಭವರೋಗವೈದ್ಯ"ನೆಂಬ ಹೆಸರು ಬಂದಿರುವುದೂ, ಬುದ್ಧನಿಗೆ "ಭೈಷಜ್ಯಗುರು" ವೆಂಬ ಹೆಸರು ಬಂದಿರವುದೂ, ಇದನ್ನೇ ಸಮರ್ಥಿಸುತ್ತವೆ. ನಮ್ಮ ದೇಶದಲ್ಲಿ ಆಧ್ಯಾತ್ಮಿಕ ಸಾಧನೆಗೆ ಹೆಚ್ಚು ಗಮನ ಕೊಟ್ಟದು ನಿಜವಾದರೂ, ದೇಹಾರೋಗ್ಯವನ್ನಾಗಲಿ ಅಥವಾ ಸುಖಜೀವನವನ್ನಾಗಲಿ ಹಿಂದಿನವರು. ಅಲಕ್ಷ್ಯಮಾಡಲಿಲ್ಲ; "ಜೀವೇಮಶರದಶ್ಶತಮ್", 'ಮೋದಾಮ ಶರದಶ್ಶತಮ್", ಎಂಬ ದಿವ್ಯವಾಣಿಗಳೂ, "ಶರೀರಮಾದ್ಯಂ ಖಲು ಧರ್ಮಸಾಧನಮ್", ಎಂಬ ಕಾಳಿದಾಸ ಮಹಾಕವಿಯ ಉಪದೇಶವಾಣಿಯೂ ಇದನ್ನು ಬಹಳ ಚೆನ್ನಾಗಿ ಸೂಚಿಸುತ್ತವೆ.

[illegible]

ಧವಾಗಿ ಚರಕಾಚಾರ್ಯರು ಮತ್ತು ಸುಶ್ರುತಾಚಾರ್ಯರು [illegible]
ಅಮೋಘವಾಗಿದೆ. ಶಸ್ತ್ರಚಿಕಿತ್ಸೆಯ ಸಂಬಂಧವಾಗಿ [illegible]
ಕಾಚಾರ್ಯ ವಾಗ್ಭಟರನ್ನು [illegible]
ರಾಗಿದ್ದಾರೆ. ಚರಕಾಚಾರ್ಯರ [illegible]
ಸಂಗತಿಗಳು [illegible]
ಚಿಕಿತ್ಸೆಗಾಗಿ ವಿಶೇಷ ರೀತಿಯ [illegible]
ತಿಯು ಕಾಳಿದಾಸ ಮಹಾಕವಿಯ ರಘುವಂಶದಲ್ಲಿ [illegible]
ಕುಮಾರ ವೈದ್ಯ ವ್ಯವಸ್ಥೆಯು ಆಗ್ಗೆ [illegible]
ನಾವು ಗ್ರಹಿಸಬಹುದಾಗಿದೆ. [illegible]
ದೇವೀ ಹಾಕುವ ವಿಧಾನವು [illegible]
ವರು ಪಾಶ್ಚಾತ್ಯರಿಗಿಂತ ಮುಂಚಿತವಾಗಿಯೇ [illegible]
ಹೆಮ್ಮೆಪಡಬಹುದಾದ ವಿಷಯ. ಇಂದು [illegible] ಶಸ್ತ್ರಚಿಕಿತ್ಸೆ [illegible]
ಸಲ್ಪಟ್ಟಿರುವ ಶಸ್ತ್ರ ಚಿಕಿತ್ಸೆಗಳು ಅನೇಕ ಶತಮಾನಗಳಿಗೆ ಮುಂಚೆ ಆಯುರ್ವೇದ
ವೈದ್ಯರಿಂದ ನಡೆಯುತ್ತಿದ್ದುವಂತೆ. [illegible]
ಬಳಕೆಯಲ್ಲಿದ್ದುವಂತೆ. ಅವುಗಳಲ್ಲಿ ಕೆಲವಂತೂ, [illegible]
ದಾದಷ್ಟು ಹರಿತವಾಗಿದ್ದುವೆಂದು ವೈದ್ಯಗ್ರಂಥಗಳಲ್ಲಿ ವರ್ಣಿತವಾಗಿರುವುದು [illegible]
ಲ್ಲರಿಗೂ ತಿಳಿದೇ ಇದೆ. ಪಾಶ್ಚಾತ್ಯ ದೇಶಗಳಲ್ಲಿ ಇತ್ತೀಚೆಗೆ [illegible]
ಬಂದ ಅದ್ಭುತವಾದ ಕೆಲವು ಶಸ್ತ್ರಚಿಕಿತ್ಸೆಗಳ [illegible]
ವೈದ್ಯರಿಗೆ ಗೊತ್ತಿದ್ದ ಸಂಗತಿಯು, ನಿಜವಾಗಿಯೂ ಸಂತೋಷಕರವೇ ಸರಿ

ಆಯುರ್ವೇದ ವೈದ್ಯವೂ, ಶಸ್ತ್ರಚಿಕಿತ್ಸೆಯೂ, ಹಲವು ಕಾರಣಗಳಿಂದ [illegible]
ದೆಸೆಗೆ ಬಂದವು. ಆಯುರ್ವೇದ ಕ್ರಮದ ಶಸ್ತ್ರಚಿಕಿತ್ಸೆಯು [illegible]
ಕಾಲವಾಯಿತು. ಆಯುರ್ವೇದ ವೈದ್ಯವನ್ನು ಯುನಾನಿ ವೈದ್ಯವನ್ನೂ [illegible]

..ವನಗೊಳಿಸಿ, ಮತ್ತೆ ಊರ್ಜಿತ ಸ್ಥಿತಿಗೆ ತರುವ ಪ್ರಯತ್ನಗಳು ಈಚೆಗೆ ನಡೆಯುತ್ತಿವೆ. ನಮ್ಮ ಮುತ್ತಾತಂದಿರು ಮತ್ತು ನಮ್ಮ ತಾತಂದಿರು ಆಯುರ್ವೇದಕ್ಕೆ ..ಟ್ಟ ಪ್ರೋತ್ಸಾಹವನ್ನು ನೀವು ಕೃತಜ್ಞತೆಯಿಂದ ಸೂಚಿಸಿರುವುದು ನಮ್ಮ ಮನ..ಗೆ ಬಹಳ ಸಂತೋಷವನ್ನುಂಟುಮಾಡಿದೆ. ಆಯುರ್ವೇದದ ಪುರೋಭಿವೃದ್ಧಿ..ರುಲ್ಲಿ ನಮಗೆ ವಿಶೇಷವಾದ ಸಹಾನುಭೂತಿಯಿದೆ ಎಂದು ಈ ಸಂದರ್ಭದಲ್ಲಿ ತಿಳಿಸ..ಯಸುತ್ತೇವೆ.

ಆಯುರ್ವೇದ ಮತ್ತು ಯುನಾನಿ ವೈದ್ಯ ಸಂಸ್ಥೆಗಳ ಪುರೋಭಿವೃದ್ಧಿ ಸಾಧನೆಯಲ್ಲಿ ನಮ್ಮ ಸರ್ಕಾರದವರೂ, ನಾನಾ ಜಿಲ್ಲಾಬೋರ್ಡು ಮುಂತಾದ ಸಂಸ್ಥೆಗಳೂ, ಮತ್ತು ಪರೋಪಕಾರ ಬುದ್ಧಿಯುಳ್ಳ ಕೆಲವರು ದೊಡ್ಡ ಮನುಷ್ಯರೂ ತೀವ್ರಾಸಕ್ತಿಯನ್ನು ವಹಿಸಿರುವುದು ಶ್ಲಾಘ್ಯವಾಗಿದೆ. ಅದರ ಪರಿಣಾಮವಾಗಿ ನಮ್ಮ ಸಂಸ್ಥಾನದಲ್ಲಿ ಆಯುರ್ವೇದ ಮತ್ತು ಯುನಾನಿ ವೈದ್ಯ ಸಂಸ್ಥೆಗಳ ಸಂಖ್ಯೆಯು ಇನ್ನೂರ ಅರವತ್ತಕ್ಕಿಂತಲೂ ಹೆಚ್ಚಾಗಿದೆ. ವೈದ್ಯರ ಮತ್ತು ಹಕೀಮರ ಸಂಬಳಗಳು ಸಬ್ ಅಸಿಸ್ಟೆಂಟ್ ಸರ್ಜನ್‌ಗಳ ಸಂಬಳಗಳಿಗೆ ಸಮವಾಗಿರುವಂತೆ ಅವುಗಳನ್ನು ಹೆಚ್ಚಿಸಲಾಗಿದೆ. ಬೆಂಗಳೂರಿನಲ್ಲಿರುವ ಭಾರತೀಯ ವೈದ್ಯ ಸಂಸ್ಥೆಯಲ್ಲೂ ಮತ್ತು ಮೈಸೂರಿನಲ್ಲಿರುವ ಆಯುರ್ವೇದ ಮತ್ತು ಯುನಾನಿ ವೈದ್ಯ ಮಹಾಪಾಠಶಾಲೆಯ ಸಂಬಂಧದ ಚಿಕಿತ್ಸಾಲಯಗಳಲ್ಲೂ, ಲಕ್ಷಾಂತರ ಮಂದಿ ರೋಗಿಗಳ ಚಿಕಿತ್ಸೆಗೆ ಸೌಕರ್ಯಗಳು ಕಲ್ಪಿತವಾಗಿವೆ. ಆಯುರ್ವೇದ ಮತ್ತು ಯುನಾನಿ ವೈದ್ಯಶಾಸ್ತ್ರಗಳನ್ನು ವ್ಯಾಸಂಗ ಮಾಡುವವರಿಗೆ ಕೊಡತಕ್ಕ ವಿದ್ಯಾರ್ಥಿ ವೇತನಗಳ ಮೊಬಲಗುಗಳನ್ನು ಈಚೆಗೆ ಹೆಚ್ಚಿಸಲಾಗಿದೆ. ಹಿಂದೆ ಮೈಸೂರು ಸಂಸ್ಥಾನದಲ್ಲಿ ಆಯುರ್ವೇದ ಶಿಕ್ಷಣವನ್ನು ಪಡೆದು ವೈದ್ಯರತ್ನ ಶ್ರೀ ಗೋಪಾಲಚಾರ್ಯರೂ, ಶ್ರೀ ಕೆಂಪುರಾಮಾಪಂಡಿತರೂ ಅಮಿತವಾದ ಖ್ಯಾತಿಯನ್ನು ಗಳಿಸಿದರು. ಆಯುರ್ವೇದ ಮತ್ತು ಯುನಾನಿ ವೈದ್ಯ ಶಿಕ್ಷಣಕ್ಕಾಗಿ ಈಗ ಒದಗಿಸಿರುವ ಹೆಚ್ಚಿನ ಸೌಕರ್ಯಗಳ ಪ್ರಯೋಜನವನ್ನು ಪಡೆದು ಅನೇಕ ಮಂದಿಗಳು ಅವರಂತೆ ಖ್ಯಾತಿಯನ್ನು ಗಳಿಸುವಂತಾಗಲೆಂದು, ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಮೈಸೂರು ಆಯುರ್ವೇದ ವೈದ್ಯ ಸಂಘದ ಕಾರ್ಯಕಲಾಪಗಳು ಇಪ್ಪತ್ತೈದು ವರ್ಷಗಳ ಕಾಲ ಯಶಸ್ವಿಯಾಗಿ ನೆರವೇರಿರುವುದು ಬಹಳ ಸಂತೋಷಕರವಾಗಿದೆ. ಇದು, ಅದರ ಅಧ್ಯಕ್ಷರೇ ಮುಂತಾದವರ ಕಾರ್ಯದಕ್ಷತೆಗೆ ಪ್ರತ್ಯಕ್ಷ ನಿದರ್ಶನ. ಸಂಘದ ಕಾರ್ಯಕ್ಷೇತ್ರವು ವರ್ಷ ವರ್ಷವೂ ವಿಸ್ತಾರವಾಗಿ, ಸಂಘದ ಸುವರ್ಣೋತ್ಸವದ ವೇಳೆಗೆ ಅದರ ಕಾರ್ಯಕಲಾಪಗಳು ವಿಶೇಷವಾಗಿ ಹೆಚ್ಚಲೆಂದು ನಾವು ಹಾರೈಸುತ್ತೇವೆ. ಆಯುರ್ವೇದ ವೈದ್ಯ ಸಂಘವವರು ಸ್ಥಳ ಪರಸ್ಥಳ

ಗಳ ಅನೇಕ ವೈದ್ಯರುಗಳಿಗೆ ಹಲವು ವಿಷಯಗಳಲ್ಲಿ ಪ್ರಾಯೋಗಿಕ ಶಿಕ್ಷಣ ಕೊಡುತ್ತಿರುವುದರ ಜೊತೆಗೆ ಶುದ್ಧವಾದ ಔಷಧಗಳನ್ನು ಸ್ವಲ್ಪ ಬೆಲೆಗಾಗಿ ಒದಗಿಸುತ್ತಿರುವುದು ಗಮನಾರ್ಹವಾಗಿದೆ.

ಇದೇ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಆಯುರ್ವೇದ ವೈದ್ಯರ ನಾಲ್ಕನೆಯ ಸಮ್ಮೇಳನವೂ, ಅದರ ಅಂಗವಾಗಿ ಆಯುರ್ವೇದ ವಸ್ತು ಪ್ರದರ್ಶನವೂ ಏರ್ಪಟ್ಟಿವೆ. ಇವುಗಳಿಂದ ವಿಶೇಷ ರೀತಿಯಲ್ಲಿ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ. ಆಯುರ್ವೇದ ವಿದ್ವಾನ್ ಶ್ರೀ ವೆಂಕಟರಾವ್ ಪಂಡಿತರವರು ಸಮ್ಮೇಳನದ ಅಧ್ಯಕ್ಷರಾಗಲು ಸಮ್ಮತಿಸಿರುವುದು, ಸಮ್ಮೇಳನದ ಸುಯೋಗವೆಂದು ನಾವು ಭಾವಿಸಿದ್ದೇವೆ. ಇವರು ಆಯುರ್ವೇದ ವೈದ್ಯದಲ್ಲೂ, ಪಾಶ್ಚಾತ್ಯ ವೈದ್ಯದಲ್ಲೂ, ಪರಿಣತರಾಗಿರುವುದಲ್ಲದೆ, ಅಮಿತವಾದ ಅನುಭವವನ್ನು ಪಡೆದಿದ್ದಾರೆ. ಇವರು ಔಷಧ ವಸ್ತುಗಳ ಗುಣದೋಷಗಳನ್ನೂ ಬಲ್ಲವರಾಗಿದ್ದಾರೆ. ಆದಕಾರಣ, ಇವರ ನೇತೃತ್ವದಲ್ಲಿ ನಡೆಯುವ ಈ ಸಮ್ಮೇಳನವು ಸರ್ವವಿಧಗಳಲ್ಲೂ ಯಶಸ್ವಿಯಾಗಿ, ಆಯುರ್ವೇದದ ಪ್ರಗತಿಸಾಧನೆಗೆ ಅಮೂಲ್ಯವಾದ ಸಲಹೆಗಳು ದೊರೆಯುತ್ತವೆಂದು ನಾವು ನಂಬಿದ್ದೇವೆ.

ಈಗ ನಡೆಯಬೇಕಾಗಿರುವ ರಜತ ಮಹೋತ್ಸವ, ಮೈಸೂರು ಸಂಸ್ಥಾನದ ಆಯುರ್ವೇದ ವೈದ್ಯರ ನಾಲ್ಕನೆಯ ಸಮ್ಮೇಳನ ಮತ್ತು ಆಯುರ್ವೇದ ವಸ್ತು ಪ್ರದರ್ಶನ ಸಮಾರಂಭಗಳ ಕಾರ್ಯಕಲಾಪಗಳು ಇನ್ನು ನೆರವೇರಬಹುದೆಂದು ನಾವು ಸಂತೋಷದಿಂದ ಸೂಚಿಸಲಿಚ್ಛಿಸುತ್ತೇವೆ. ಇವು ಪೂರ್ಣಯಶಸ್ವಿಯಾಗಿ ನೆರವೇರಲೆಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

---






ಟಿ. ರಂಗಯ್ಯ

ಇವರ

ರಂಗನಾಥ

ಅಗರಬತ್ತಿಗಳನ್ನೇ

ಉಪಯೋಗಿಸಿರಿ.

ರಂಗನಾಥ

ಪರ್ ಫ್ಯೂಮರಿ ವರ್ಕ್ಸ್

ಈದಿಗ, ಮೈಸೂರು



Regd. No. M. 5276. AYURVEDA Kannada Monthly



Cover Printed at L. N. Press, Mysore